
ಯುವ ಸ್ಫೂರ್ತಿ



ನಿಜವಾದ ಶಿಕ್ಷಣವೆಂದರೆ ಮಾನವೀಯತೆಯ ವಿಕಾಸ.
–ಸ್ವಾಮಿ ವಿವೇಕಾನಂದ

MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

YUVA MARGA KANNADA DAILY NEWS PAPER



ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111



ಸಂಪುಟ: 04 | ಸಂಚಿಕೆ : 199 | ಶುಕ್ರವಾರ : 23–05–2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2–00

VOLUME: 04 | ISSUE: 199 | FRIDAY : 23–05–2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00


### ಸ್ಥಳೀಯ ಶಾಸಕ ಹಂಪಯ್ಯ ನಾಯಕ ವಿರುದ್ಧ ರೈತರ ಗರಂ | ಜೋಳ ತುಂಬಿದ ಟ್ರ್ಯಾಕ್ಟರ್ ಅಡ್ಡಗಟ್ಟಿ ರಸ್ತೆ ತಡೆ


# ಜೋಳ ಖರೀದಿ ಸ್ಥಗಿತ, ಹೆದ್ದಾರಿ ತಡೆದು ರೈತರ ಆಕ್ರೋಶ

**ಯುವ ಮಾರ್ಗ ಸುದ್ದಿ**

ಮಾನ್ವಿ,ಮೇ.23– ತಾವು ಬೆಳೆದ ಜೋಳವನ್ನು ಖರೀದಿ ಕೇಂದ್ರಗಳಲ್ಲಿ ಖರೀದಿಸುವುದನ್ನು ನಿಲ್ಲಿಸಿರುವುದನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಮಾನ್ವಿ ಪಟ್ಟಣದ ಬಸವ ವೃತ್ತದಲ್ಲಿ ರೈತರು ನಡೆಸಿದ ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಂಡಿತು. ರಾಯಚೂರು–ಸಿಂಧನೂರು ರಾಜ್ಯ ಹೆದ್ದಾರಿಯಲ್ಲಿ 4 ಗಂಟೆಗಳ ಕಾಲ ರಸ್ತೆ ತಡೆ ನಡೆಸಿದ ರೈತರು, ಜೋಳ ತುಂಬಿದ ಟ್ರಾಕ್ಟರ್‌ಗಳನ್ನು ರಸ್ತೆಗೆ ಅಡ್ಡಗಟ್ಟಿ, ಜೋಳವನ್ನು ರಸ್ತೆಯಲ್ಲಿ ಚೆಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದಾಗಿ ಹೆದ್ದಾರಿಯಲ್ಲಿ 4 ಕಿ.ಮೀ. ವರೆಗೂ ವಾಹನಗಳು ಸ್ಥಗಿತಗೊಂಡು ಪ್ರಯಾಣಿಕರು ಪರದಾಡಿದರು.

**ಸಮಸ್ಯೆಗಳ ಸುರಿಮಳೆ, ಕೇವಲ ಭರವಸೆ:**

ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾಜು ಉಪನಿರ್ದೇಶಕ ಕೃಷ್ಣ ಅವರಿಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಗೌರವಾಧ್ಯಕ್ಷ ಚಾಮರಸ ಮಾಲಿಪಾಟೀಲ್ ಮನವಿ ಸಲ್ಲಿಸಿ ಮಾತನಾಡಿದರು. ಮಾನ್ವಿ ಭಾಗದ ರೈತರು ಮುಂಗಾರು ಹಂಗಾಮಿನಲ್ಲಿ ಬೆಳೆದ ಜೋಳವನ್ನು ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ಮಾರಾಟ ಮಾಡಲು ಮಾನ್ವಿ ಟಿ.ಎ.ಪಿ.ಸಿ.ಎಂ.ಎಸ್. ಜೋಳ





**ಸಿಂಧನೂರು ಶಾಸಕರ ಮಧ್ಯಸ್ಥಿಕೆ, ಮಾನ್ವಿ ಶಾಸಕರ ಅನುಪಸ್ಥಿತಿ**

ರೈತರ ಪ್ರತಿಭಟನೆ ಮಾಡುತ್ತಿರುವ ಬಗ್ಗೆ ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ತಿಳಿದುಕೊಂಡು ದೂರವಾಣಿ ಮೂಲಕ ರೈತ ಮುಖಂಡರ ಸಮಸ್ಯೆಗಳನ್ನು ಆಲಿಸಿದರು. ತಕ್ಷಣ ಜಿಲ್ಲಾಧಿಕಾರಿಗಳೊಂದಿಗೆ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರೊಂದಿಗೆ ಮತ್ತು ಅಧಿಕಾರಿಗಳೊಂದಿಗೆ ಮಾತನಾಡಿ, ಹತ್ತು ದಿನಗಳಿಂದ ಸರತಿ ಸಾಲಿನಲ್ಲಿ ಕಾಯುತ್ತಿರುವ 30ಕ್ಕೂ ಹೆಚ್ಚು ರೈತರ ಜೋಳವನ್ನು ಖರೀದಿ ಕೇಂದ್ರಗಳಲ್ಲಿ ತೆಗೆದುಕೊಳ್ಳುವಂತೆ ಮಾಡಿದರು. ಅಲ್ಲದೆ, ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ಖರೀದಿ ಮಾಡುವ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು. ರೈತರ ಪ್ರತಿಭಟನೆ ಮಾಡುತ್ತಿರುವ ಸ್ಥಳಕ್ಕೆ ಆಗಮಿಸಿ ಸಮಸ್ಯೆ ಆಲಿಸದ ಮಾನ್ವಿ ಶಾಸಕ ಹಂಪಯ್ಯನಾಯಕ ಬಗ್ಗೆ ರೈತರು ಆಕ್ರೋಶ ವ್ಯಕ್ತಪಡಿಸಿದರು. ಆದರೆ, ತಾಲೂಕಿನ ರೈತರ ಸಮಸ್ಯೆಗಳಿಗೆ ಸ್ಪಂದಿಸಿದ ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಅವರ ಬಗ್ಗೆ ರೈತರು ಮೆಚ್ಚುಗೆ ವ್ಯಕ್ತಪಡಿಸಿದರು.



**ನಗುತ್ತಲೇ ಸಮಸ್ಯೆ ಆಲಿಸಿದ ಅಧಿಕಾರಿ, ಮಾತಿನ ಚಕಮಕಿ**

ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ಕೃಷ್ಣ ರೈತರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿರುವಾಗ ನಗುತ್ತಿದ್ದುದು ರೈತರನ್ನು ಮತ್ತಷ್ಟು ಕೆರಳಿಸಿತು. ಒಂದು ಹಂತದಲ್ಲಿ ಚಾಮರಾಸ ಮಾಲಿಪಾಟೀಲ್ ಅವರು ಆಹಾರ ಮತ್ತು ನಾಗರಿಕರ ಸರಬರಾಜು ಅಧಿಕಾರಿಯ ಕೈ ಹಿಡಿದು ತಳ್ಳುತ್ತ ನಿನಗೇನೂ ಗೊತ್ತಾಗುವುದಿಲ್ಲ ಹೋಗ್ರಿ... ಹೋಗ್ರಿ... ಎಂದು ಗೆದರಿಸುತ್ತಾ ಅವಾಚ್ಯ ಶಬ್ದಗಳಿಂದ ನಿಂದಿಸಿದರು.

ಖರೀದಿ ಕೇಂದ್ರದಲ್ಲಿ 5 ತಿಂಗಳ ಹಿಂದೆ 1510 ರೈತರು ನೋಂದಾಯಿಸಿಕೊಂಡಿದ್ದರು. ಆದರೆ, ಇನ್ನೂ 341ಕ್ಕೂ ಹೆಚ್ಚು ರೈತರ ಜೋಳ ಖರೀದಿ ಬಾಕಿ ಇರುವಾಗಲೇ, ರೈತರ ಗಮನಕ್ಕೆ ತರದೆ ಮೇ 16ರಿಂದ ಜೋಳ ಖರೀದಿಯನ್ನು ಸ್ಥಗಿತಗೊಳಿಸಲಾಗಿದೆ ಎಂದು ದೂರಿದರು.ಹತ್ತು ದಿನಗಳಿಂದ ರೈತರು ಟ್ರಾಕ್ಟರ್‌ಗಳಲ್ಲಿ ಜೋಳವನ್ನು ತಂದು ಖರೀದಿ ಕೇಂದ್ರದಲ್ಲಿ ಸರತಿ

2ನೇ ಪುಟಕ್ಕೆ

# ನಮ್ಮ ಪ್ರಾಚೀನರ ಬದುಕು ನಮಗೆ ಮಾದರಿಯಾಗಿದೆ : ಡಾ.ಹನುಮಂತಪ್ಪ.

**ಯುವ ಮಾರ್ಗ ಸುದ್ದಿ**

ಲಿಂಗಸುಗೂರು,ಮೇ.23– ಪುರಾತನ ಕಾಲದ ಗೃಹ ಬಳಕೆಯ ವಸ್ತುಗಳು ನಮಗೆ ವಾದರಿಯಾಗಿವೆ.ಅಂತಹ ಗೃಹ ಬಳಕೆ ವಸ್ತುಗಳು ನಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಬಿಂಬಿಸುತ್ತವೆ. ಅವರು ಕಾಲಕ್ಕೆ ತಕ್ಕಂತೆ ದಿನ ಬಳಕೆಯ ವಸ್ತುಗಳ ಬಳಕೆಯಲ್ಲಿ ಹೊಸತನ ತಂದರು ಅವರ ಬದುಕು ನಮಗೆ ಮಾದರಿಯಾಗಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಹನುಮಂತಪ್ಪ ಅಭಿಪ್ರಾಯ ಪಟ್ಟರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದಲ್ಲಿ ಪುರಾತನ ಗೃಹ ಬಳಕೆಯ ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ದೈನಂದಿನ ಬದುಕಿನಲ್ಲಿ ನಾವು ಬಳಸುವ ವಸ್ತುಗಳು ನಮ್ಮ ಜೀವನದ ಭಾಗವೇ ಆಗಿವೆ.



ನಮ್ಮ ಪ್ರಾಚೀನರ ಬದುಕು ನಮಗೆ ಮಾದರಿಯಾಗಿದ್ದು ಅವರು ತಮ್ಮ ಬದುಕಿನ ಸ್ಥಿತ್ಯಂತರ ಎಂಬಂತೆ ಕಾಲಕ್ಕೆ ತಕ್ಕಂತೆ ವಸ್ತುಗಳ ಬಳಕೆಯಲ್ಲಿ ಹೊಸತನ ಕಂಡುಕೊಂಡರು. ಹೀಗಾಗಿ ಮನುಷ್ಯದಿನದಿಂದ ದಿನಕ್ಕೆ ಸಾಕಷ್ಟು ವಿಧಗಳಲ್ಲಿ ಬದಲಾವನೆ ಆಗಲು ಸಾಧ್ಯವಾಯಿತು.

ತಂತ್ರಜ್ಞಾನ ಮುಂದುವರೆದಿರದ ಕಾಲದಲ್ಲಿ ಬಗೆ ಬಗೆಯ ವೈವಿಧ್ಯಮಯ ವಸ್ತುಗಳನ್ನು ನಮ್ಮ ಪ್ರಾಚೀನರು ಬಳಸಿದರು. ಆಧುನಿಕ ಕಾಲದಲ್ಲಿ ನಾವು ಎಷ್ಟೇ ಮುಂದುವರೆದರೂ ಪುರಾತನ ವಸ್ತುಗಳು ನಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ರೂಪಕಗಳಾಗಿವೆ. ಈ ದಿಶೆಯಲ್ಲಿ ಪುರಾತನ ವಸ್ತು ಪ್ರದರ್ಶನ ಸಂಸ್ಕೃತಿಯ ಅರಿವನ್ನು ಮೂಡಿಸುವ ಆಯಾಮವಾಗಿದೆ

2ನೇ ಪುಟಕ್ಕೆ

### ಎಸ್ಸೆಸ್ಸೆಲ್ಸಿ ಪರೀಕ್ಷೆ–2ರ ಪೂರ್ವಭಾವಿ ಸಭೆ

# ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಗಮವಾಗಿ ನಡೆಸಲು ಅಪರ ಜಿಲ್ಲಾಧಿಕಾರಿಗಳ ಸೂಚನೆ

**ಯುವ ಮಾರ್ಗ ಸುದ್ದಿ**

ರಾಯಚೂರು ಮೇ.23– ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ–2 ಮೇ.26 ರಿಂದ ಜೂನ್ 2 ರವರೆಗೆ ನಡೆಯಲಿದ್ದು, ಪರೀಕ್ಷೆಯು ಯಾವುದೇ ಲೋಪ ದೋಷವಿಲ್ಲದೆ ಸುಗಮವಾಗಿ ನಡೆಸುವಂತೆ ಅಪರ ಜಿಲ್ಲಾದಿಕಾರಿಗಳಾದ ಶಿವಾನಂದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನ ನೀಡಿದರು.

ಬುಧವಾರ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ–2ರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆ–1ರಲ್ಲಿ ಅನುತ್ತೀರ್ಣರಾದ ಒಟ್ಟು 16,058 ವಿದ್ಯಾರ್ಥಿಗಳು ಪರೀಕ್ಷೆ–2 ಬರೆಯಲು ಹೆಸರು ನೋಂದಾಯಿಸಿದ್ದಾರೆ. ಪ್ರತಿಯೊಂದು ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಟಿವಿಗಳನ್ನು ಅಳವಡಿಸಲಾಗಿದೆ ಹಾಗೂ ಜಿಲ್ಲಾ ಹಂತದ ವೆಬ್ ಕಾಸ್ಟಿಂಗ್ ಮಾಡಿ ವೀಕ್ಷಿಸಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಬ್ಲಾಕ್ ಹಂತದಲ್ಲಿ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಕೊಠಡಿ ಮೇಲ್ವಿಚಾರಕರನ್ನು ನೇಮಿಸಿದ್ದು, ಪ್ರತಿ ಬ್ಲಾಕ್‌ಗಳಿಗೆ ಓರ್ವ ಬ್ಲಾಕ್ ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿಗಳನ್ನು ಸಹ ನೇಮಕ ಮಾಡಿಕೊಳ್ಳಲಾಗಿದೆ ಎಂದರು.



ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್‌ಗಳನ್ನು ಕಡ್ಡಾಯವಾಗಿ ನಿಷೇಧಿಸಲಾಗಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಹಾಗೂ ಪರೀಕ್ಷಾ ಕೇಂದ್ರಗಳ ಹತ್ತಿರದಲ್ಲಿರುವ ಜೆರಾಕ್ಸ್ ಮತ್ತು ಸೈಬರ್ ಕೇಂದ್ರಗಳನ್ನು ಪರೀಕ್ಷೆ ಸಮಯದಲ್ಲಿ ಮುಚ್ಚಿಸಲು

2ನೇ ಪುಟಕ್ಕೆ

# ದ್ವಿತೀಯ ಪಿಯು 3ನೇ ಪರೀಕ್ಷೆಗೆ ನೋಂದಾಯಿಸಿ ಪರೀಕ್ಷೆಗೆ ಹಾಜರಾಗಲು ಮನವಿ

**ಯುವ ಮಾರ್ಗ ಸುದ್ದಿ**

ರಾಯಚೂರು,ಮೇ.23– ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಪರೀಕ್ಷೆ–3ಕ್ಕೆ ನೋಂದಾಯಿಕೊಂಡು ಪರೀಕ್ಷೆಗೆ ಹಾಜರಾಗಬೇಕು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೊಟ್ಟೂರು ಬಸಪ್ಪ ಅವರು ಹೇಳಿದರು.

ಗುರುವಾರ ದಂದು ನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

2025 ದ್ವಿತೀಯ ಪಿಯುಸಿ ಪರೀಕ್ಷಾ–2ಕ್ಕೆ ಅವಕಾಶ ಕಲ್ಪಿಸಿದ್ದರಿಂದ ರಾಜ್ಯದಲ್ಲಿ 60,692 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅದರಂತೆ ರಾಯಚೂರು ಜಿಲ್ಲೆಯಲ್ಲಿ 6,788 ವಿದ್ಯಾರ್ಥಿಗಳ ಪೈಕಿ 1625 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಪ್ರತಿಶತ 23.09 ಫಲಿತಾಂಶ ಬಂದಿದೆ.



ರಾಜ್ಯ ಸರ್ಕಾರವು ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಮೂರನೇ ಪರೀಕ್ಷೆ–3ಯನ್ನು ಜೂನ್ 09 ರಿಂದ ಜೂನ್ 20ರವರೆಗೆ ನಡೆಸಲು ದಿನಾಂಕ ನಿಗದಿಪಡಿಸಿದೆ. ಆದ್ದರಿಂದ ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳಲು ಮೇ 28 ಅಂತಿಮ ದಿನಾಂಕವಾಗಿದ್ದು, ಅನುತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳು ತಮ್ಮ ಮುಂದಿನ ಉತ್ತಮ ಭವಿಷ್ಯಕ್ಕಾಗಿ ವಿದ್ಯಭ್ಯಾಸ ಮುಂದುವರಿಸಬೇಕು ಎಂಬುದು ಘನ ರಾಜ್ಯ ಸರ್ಕಾರದ ಆಶಯವಾಗಿರುತ್ತದೆ.

ಪಾಲಕರಲ್ಲಿ ಮನವಿ: ವಿದ್ಯಾರ್ಥಿಗಳು ಓದಿನಲ್ಲಿ ಹಿಂದುಳಿಯುವುದು ಕೆಲವೊಮ್ಮೆ ಸಹಜ. ಕಡಿಮೆ ಅಂಕಗಳು ಬಂದಾಗ ಮತ್ತು ಪರೀಕ್ಷೆಯಲ್ಲಿ ಅನುತ್ತೀರ್ಣರಾದಾಗ ಯಾವುದೇ ಕಾರಣಕ್ಕೂ ಕುಗ್ಗಬಾರದು. ಈ ಬಗ್ಗೆ ಪಾಲಕರು ಮಕ್ಕಳಲ್ಲಿ ತಿಳಿ ಹೇಳಿ ಪರೀಕ್ಷೆ–3ಗೆ ರಾಯಚೂರು ಜಿಲ್ಲೆ ಎಲ್ಲಾ ವಿದ್ಯಾರ್ಥಿಗಳು ನೋಂದಾಯಿಸಿಕೊಂಡು ಪರೀಕ್ಷೆಗೆ ಹಾಜರಾಗುವಂತೆ ಆಯಾ ವಿದ್ಯಾರ್ಥಿಗಳ ಪೋಷಕರು ಮಕ್ಕಳಿಗೆ ಪೇರೇಪಿಸಬೇಕು ಎಂದು ಇದೆ ವೇಳೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ವಿದ್ಯಾರ್ಥಿಗಳ ಪಾಲಕರಲ್ಲಿ ಮನವಿ ಮಾಡಿದರು.

2ನೇ ಪುಟಕ್ಕೆ

# ರೈತರಿಗೆ ಕಡ್ಡಾಯವಾಗಿ ರಶೀದಿ ನೀಡಿ : ಕೃಷಿ ಅಧಿಕಾರಿ ಮಂಜುಳಾ



**ಯುವ ಮಾರ್ಗ ಸುದ್ದಿ**

ಗಿಲ್ಲೆಸುಗೂರು,ಮೇ.23– ಬಿತ್ತನೆ ಬಿಜ ಕ್ರಿಮಿನಾಶಕ ರಸಗೊಬ್ಬರ ಮಾರಾಟ ಮಾಡಿದ ನಂತರ ರೈತರಿಗೆ ಕಡ್ಡಾಯವಾಗಿ ಬಿಲ್ ನೀಡಬೇಕು ಎಂದು ಕೃಷಿ ಅಧಿಕಾರಿ ಮಂಜುಳಾ ಅವರು ಸೂಚಿಸಿದರು. ಹೋಬಳಿಯ ವಿವಿಧ ಬಿತ್ತನೆ ಬಿಜ ಹಾಗೂ ಕ್ರಿಮಿನಾಶಕ ಮಾರಟ ಮಳಿಗೆಗಳಿಗೆ ಬೇಟಿ ನೀಡಿ ಪರಿಶೀಲಿಸಿದರು. ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ ಅಧಿಕೃತ ಕ್ರಿಮಿನಾ ಶಕಗಳನ್ನು ಮಾರಟ ಮಾಡಬೇಕು. ನಕಲಿ ಬಿಲ್, ವಸ್ತುಗಳನ್ನು ನೀಡುವುದು ಕಾನೂನು ಪ್ರಕಾರ ರೈತರ ಹಿತ ಕಾಪಾಡ ಲು ಮಾಲೀಕರು ಮುಂದಾಗಬೇಕು. ಪ್ರತಿಯೊಂದು ದಾಖಲೆ ಮೂರು ತಿಂಗಳ ವರೆಗೆ ಶೇಖರಿಸಿ ಇಡಬೇಕು. ಅನ ಧಿಕೃತ ದಾಸ್ತಾನು ಸಂಗ್ರಹ ಕಳಪೆ ಬಿತ್ತನೆ ಬೀಜ ,ಕ್ರಿಮಿನಾಶಕ ಮಾರಟ ಮಾಡುವುದು ಕಂಡು ಬಂದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನಿಡಿದರು.

ಮೊದಲನೇಯ ಪುಟದಿಂದ

# ಜೋಳ ಖರೀದಿ ಸ್ಥಗಿತ, ಹೆದ್ದಾರಿ ತಡೆದು ರೈತರ ಆಕ್ರೋಶ

ಸಾಲಿಗಾಗಿ ಕಾಯುತ್ತಿದ್ದು, ಈಗ ಜೋಳ ಖರೀದಿಸದಿದ್ದರೆ ರೈತರಿಗೆ ಟ್ರಾಕ್ಟರ್ ಬಾಡಿಗೆ ನಷ್ಟವಾಗುತ್ತದೆ. ಜೋಳ ಕೊಯ್ಲು ಮಾಡಿ 5 ತಿಂಗಳಾಗಿರುವುದರಿಂದ ಖರೀದಿ ಮಾಡದಿದ್ದರೆ ಹುಳು ಹಿಡಿದು ಹಾಳಾಗುತ್ತದೆ, ಮಾರುಕಟ್ಟೆಯಲ್ಲೂ ಮಾರಾಟವಾಗುವುದಿಲ್ಲ ಎಂದು ರೈತರು ಅಳಲು ತೋಡಿಕೊಂಡರು. ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ ಪಾಟೀಲ್, ಸಚಿವ ಎನ್.ಎಸ್. ಬೋಸರಾಜು, ಶಾಸಕ ಹಂಪಯ್ಯನಾಯಕ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೂಡಲೇ, ಖರೀದಿ ಕೇಂದ್ರದಲ್ಲಿ ಇರುವ 30ಕ್ಕೂ ಹೆಚ್ಚು ಟ್ರಾಕ್ಟರ್‌ಗಳಲ್ಲಿನ ಜೋಳವನ್ನು ತೂಕ ಮಾಡಿ ತಮ್ಮ ವಶದಲ್ಲಿಟ್ಟುಕೊಂಡು, ನಂತರ ಸರ್ಕಾರದ ಆದೇಶದಂತೆ ಗ್ರೀನ್ ಚೀಟಿ ನೀಡಿ, ಬಾಕಿ ಇರುವ ಎಲ್ಲಾ ರೈತರ ಜೋಳವನ್ನು ಖರೀದಿ ಮಾಡುವಂತೆ ಒತ್ತಾಯಿಸಿದರು.

ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ಕೃಷ್ಣ ಮನವಿ ಸ್ವೀಕರಿಸಿ ಮಾತನಾಡಿ, ಮಾನ್ವಿ ತಾಲೂಕಿನಲ್ಲಿ ಮುಂಗಾರು ಹಂಗಾಮಿನಲ್ಲಿ 2 ಲಕ್ಷ 6 ಸಾವಿರದ 600 ಕ್ವಿಂಟಾಲ್ ಜೋಳ ಖರೀದಿಗೆ ರೈತರು ನೋಂದಾಯಿಸಿಕೊಂಡಿದ್ದು, ಈಗಾಗಲೇ 1 ಲಕ್ಷ 71 ಸಾವಿರ ಕ್ವಿಂಟಾಲ್ ಜೋಳವನ್ನು ಖರೀದಿಸಲಾಗಿದೆ. ಇನ್ನೂ 40 ಸಾವಿರ ಕ್ವಿಂಟಾಲ್ ಜೋಳ ಖರೀದಿ ಬಾಕಿ ಇದೆ. ಸರ್ಕಾರದಿಂದ ಆದೇಶ ಬಂದ ನಂತರ ಉಳಿದ ಜೋಳವನ್ನು ಖರೀದಿ ಮಾಡಲಾಗುವುದು ಎಂದು ಭರವಸೆ ನೀಡಿದರು. ರೈತರ ಮನವಿಯಂತೆ, ಖರೀದಿ ಕೇಂದ್ರದಲ್ಲಿ ಗುಣಮಟ್ಟದ ಮಾನದಂಡಗಳ ಅಡಿಯಲ್ಲಿ, ಈಗಾಗಲೇ ಟ್ರಾಕ್ಟರ್‌ಗಳಲ್ಲಿ ತಂದಿರುವ 30ಕ್ಕೂ ಹೆಚ್ಚು ರೈತರ ಜೋಳವನ್ನು ತೂಕ ಮಾಡಿ ಟಿ.ಎ.ಪಿ.ಸಿ.ಎಂ.ಎಸ್. ಜೋಳ ಖರೀದಿ ಕೇಂದ್ರದಲ್ಲಿ ಇಟ್ಟುಕೊಳ್ಳಲಾಗುವುದು. ಸರ್ಕಾರದ ಆದೇಶ ಬಂದ ನಂತರ ಈ 30 ರೈತರಿಗೆ ಗ್ರೀನ್ ವೋಚರ್ ನೀಡಲಾಗುವುದು ಎಂದು ಭರವಸೆ ನೀಡಿದ ನಂತರ ರೈತರು ಪ್ರತಿಭಟನೆಯನ್ನು ಹಿಂಪಡೆದರು. ಬೆಳಿಗ್ಗೆ 11 ರಿಂದ 3 ಗಂಟೆಯವರೆಗೆ ರಸ್ತೆ ರೋಖೊ ನಡೆಸಿದರಿಂದ ವಾಹನ ಸಂಚಾರದಲ್ಲಿ ವ್ಯತ್ಯಯವಾಯಿತು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಮಾರಾಟ ನಿಗಮದ ಜಿಲ್ಲಾ ವ್ಯವಸ್ಥಾಪಕರು ಹಾಗೂ ಮಾನ್ವಿ ತಾಲೂಕು ನೋಡಲ್ ಅಧಿಕಾರಿ ಆಶಿಕ್ ಅಲಿ, ತಹಸೀಲ್ದಾರ್ ಭೀಮರಾಯ ಸೋಮಸಮುದ್ರ, ಆಹಾರ ನಿರೀಕ್ಷಕ ದೇವರಾಜ, ಉಪತಹಸೀಲ್ದಾರ್ ವಿರುಪಣ್ಣ, ಮಾಜಿ ಶಾಸಕ ಗಂಗಾಧರ ನಾಯಕ, ಟಿ.ಎ.ಪಿ.ಸಿ.ಎಂ.ಎಸ್. ಅಧ್ಯಕ್ಷ ತಿಮ್ಮರೆಡ್ಡಿ ಭೋಗಾವತಿ, ಕಾರ್ಯದರ್ಶಿ ರಮೇಶ, ಕರವೇ ತಾಲ್ಲೂಕು ಅಧ್ಯಕ್ಷ ಡಿ. ಬಸವನಗೌಡ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಸೂಗುರಯ್ಯಸ್ವಾಮಿ ಆರ್.ಎಸ್.ಮಠ, ರೈತ ಮುಖಂಡರಾದ ಲಿಂಗರೆಡ್ಡಿ ಪಾಟೀಲ್, ದೊಡ್ಡ ಬಸವನಗೌಡ, ಶಂಕರಪ್ಪ, ಬಸವರಾಜ, ಶರಣಪ್ಪ ಗವಿಗಟ್ಟ, ವೆಂಕಟೇಶ ಕರಡಿಗುಡ್ಡ, ಶಂಕರಪ್ಪ, ಹಾಜಿಮಸ್ತಾನ್, ದುರ್ಗೇಶ್, ಚಾಮರಸ ಜಾನೆಕಲ್, ಹುಲಿಗೆಪ್ಪ, ಹನುಮಂತ ನಸ್ಲಾಪುರ, ರವಿ ಸಂಗಾಪುರ, ಹನುಮರೆಡ್ಡಿ, ಮುದ್ದಣ್ಣ, ವೆಂಕಪ್ಪ ಕಾರಬಾರಿ, ದೊಡ್ಡದೇವೆಂದ್ರಪ್ಪ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು.

# ದ್ವಿತೀಯ ಪಿಯು 3ನೇ ಪರೀಕ್ಷೆಗೆ ನೋಂದಾಯಿಸಿ ಪರೀಕ್ಷೆಗೆ ಹಾಜರಾಗಲು ಮನವಿ

ಪ್ರಾಂಶುಪಾಲರಲ್ಲಿ ಮನವಿ: ವಿದ್ಯಾರ್ಥಿಗಳು ಓದಿನಲ್ಲಿ ಹಿಂದೆ ಬೀಳಲು ಕಾರಣ ಏನು? ಫಲಿತಾಂಶ ಕುಸಿಯಲು ವಾಸ್ತವವಾಗಿ ಗಂಭೀರ ಕಾರಣಗಳೇನು ಎಂಬುದು ಎಲ್ಲ ಪ್ರಾಂಶುಪಾಲರಿಗೆ ತಿಳಿದ ವಿಷಯವಾಗಿರುತ್ತದೆ. ಆದ್ದರಿಂದ ಎಲ್ಲ ಪ್ರಾಂಶುಪಾಲರು ಜಾಗೃತರಾಗಿ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಆಲೋಚಿಸಿ ಕಾರ್ಯತತ್ಪರರಾಗಬೇಕು. ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳನ್ನು 3ನೇ ಪರೀಕ್ಷೆಗೆ ನೋಂದಾಯಿಸಿ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗುವಂತೆ ಕ್ರಮವಹಿಸಬೇಕೆಂದು ಎಲ್ಲ ಪ್ರಾಂಶುಪಾಲರುಗಳಲ್ಲಿ ಮನವಿ ಮಾಡಿದರು.

2025ರ ಮಾರ್ಚನಲ್ಲಿ ಪರೀಕ್ಷೆ–1ಗೆ ಒಟ್ಟು 18,414 ವಿದ್ಯಾರ್ಥಿಗಳು ನೋಂದಾಯಿಸಿದ್ದು, ಈ ಪೈಕಿ 10,818 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಜಿಲ್ಲೆಯ ಪ್ರತಿಶತ ಫಲಿತಾಂಶವು ಶೇ.58.75 ಆಗಿದೆ. ಅಲ್ಲದೆ ಏಪ್ರಿಲ್ ಮೇ ತಿಂಗಳಿನಲ್ಲಿ ಪರೀಕ್ಷೆ–2 ನಡೆಸಲಾಗಿದ್ದು, 6,788 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿದ್ದು, ಈ ಪೈಕಿ 1,625 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ.23.09 ಫಲಿತಾಂಶವನ್ನು ಪಡೆಯಲಾಯಿತು ಎಂದು ಇದೆ ವೇಳೆ ಅವರು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ.ಸೋಮಶೇಖರಪ್ಪ ಹೋಕ್ರಾಣಿ, ಮಾನ್ವಿ ಸರ್ಕಾರಿ ಬಾಲಕರ ಪಿಯು ಕಾಲೇಜಿನ ಪ್ರಾಂಶುಪಾಲರಾದ ಡಾ.ಕುಂಟಪ್ಪ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿ ಸುಧಾ ಎಂ.ಎಂ. ಸೇರಿದಂತೆ ಇತರರು ಇದ್ದರು.

# ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಗಮವಾಗಿ ನಡೆಸಲು ಅಪರ ಜಿಲ್ಲಾಧಿಕಾರಿಗಳ ಸೂಚನೆ

ಆದೇಶ ಹೊರಡಿಸಿ ಬಿಗಿ ಬಂದೋಬಸ್ತ್ ಮಾಡಲಾಗಿದೆ ಎಂದರು.

ಜಿಲ್ಲೆಯಲ್ಲಿ 51 ಪರೀಕ್ಷೆ ಕೇಂದ್ರಗಳು: ಪರೀಕ್ಷೆಯು ಜಿಲ್ಲೆಯ ವಿವಿಧ ತಾಲೂಕುಗಳಾದ ದೇವದುರ್ಗ 08, ಲಿಂಗಸೂಗೂರು 11, ಮಾನವಿ 09, ರಾಯಚೂರು 16 ಹಾಗೂ ಸಿಂಧನೂರು 07 ಸೇರಿದಂತೆ ಒಟ್ಟು 51 ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಬಿ.ಬಡಿಗೇರ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು, ತಾಲೂಕು ನೋಡಲ್ ಅಧಿಕಾರಿಗಳು, ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು ಹಾಗೂ ಅಭಿರಕ್ಷಕರು ಸೇರಿದಂತೆ ಇತರರು ಇದ್ದರು.

# ನಮ್ಮ ಪ್ರಾಚೀನರ ಬದುಕು ನಮಗೆ ಮಾದರಿಯಾಗಿದೆ : ಡಾ.ಹನುಮಂತಪ್ಪ.

ಎಂದರು.

ಈ ಸಂದರ್ಭದಲ್ಲಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಜ್ಯೋತಿಲಕ್ಷ್ಮಿ, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಸರಿತಾ ಇಂಚೂರು ಪ್ರೊ. ದಿವ್ಯಾ ಪ್ರೊ. ಯಲ್ಲಪ್ಪ ಪೂಜಾರಿ ಪ್ರೊ. ಪಿ.ಕೆ ಲಮಾಣಿ ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯೋಜ ಕ ಪ್ರೊ. ಗಣೇಶ ದರ್ಬಿ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸೇರಿ ಇನ್ನೂ ಅನೇಕರು ಇದ್ದರು.

# ಮಳೆಯಿಂದ ನೀರು ಕಲುಷಿತಗೊಳ್ಳುವ ಸಾಧ್ಯತೆ ಮುಂಜಾಗ್ರತ ಕ್ರಮ ಕೈಗೊಳ್ಳಲು ಸಚಿವ ಖರ್ಗೆ ಮನವಿ

**ಕಲಬುರಗಿ,ಮೇ.23–**ರಾಜ್ಯದಾದ್ಯಂತ ವ್ಯಾಪಕ ಮಳೆಯಾಗುತ್ತಿದ್ದು ಜನಜೀವನ ಅಸ್ತವ್ಯಸ್ತಗೊಂಡಿದೆ. ಗ್ರಾಮೀಣ ಭಾಗದ ಜನರು ಎಚ್ಚರಿಕೆಯಿಂದ ಇರಬೇಕೆಂದು ಅದರಲ್ಲಿಯೂ ಕುಡಿಯುವ ನೀರು ಕಲುಷಿತಗೊಳ್ಳುವ ಸಾಧ್ಯತೆಗಳಿದ್ದು, ನೀರನ್ನು ಕಾಯಿಸಿ ಆರಿಸಿ ಸೇವಿಸಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕೆಂದು ಸೂಚಿಸಿದ ಅವರು, ಅತಿಯಾಗಿ ಸುರಿಯುತ್ತಿರುವ ಮಳೆಯಿಂದ ಕುಡಿಯುವ ನೀರು ಸರಬರಾಜಾಗುವ ಕೊಳವೆಗಳಿಗೆ ಕಲುಷಿತ ನೀರು ಸೇರಿಕೊಳ್ಳುವ ಸಾಧ್ಯತೆಗಳಿವೆ ನೀರು ಕಲುಷಿತಗೊಳ್ಳುವ ಸಂಭವವಿರುತ್ತದೆ. ಗ್ರಾಮೀಣ ನೀರು ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ಮುಂಜಾಗರೂಕತ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ, ಆದಾಗ್ಯೂ ಗ್ರಾಮೀಣ ಪ್ರದೇಶಗಳ ಸಾರ್ವಜನಿಕರು ನೀರನ್ನು ಕಾದಾರಿಸಿ ಕುಡಿಯುವುದು ಕ್ಷೇಮ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಕಡು ಬೇಸಿಗೆಯ ನಂತರ ಒಮ್ಮೆಲೆ ಮಳೆ ಸುರಿಯುತ್ತಿರುವುದರಿಂದ ಸಾಂಕ್ರಾಮಿಕ ರೋಗಗಳು ಹಬ್ಬಬಹುದಾಗಿದೆ, ಈ ಬಗ್ಗೆಯೂ ಗ್ರಾಮೀಣವಾಸಿಗಳು ಜಾಗ್ರತೆಯಿಂದ ಇರಬೇಕು, ಶಾಲೆಗಳು ಪುನರಾರಂಭವಾಗುವ ದಿನಗಳು ಸಮೀಪಿಸಿರುವುದರಿಂದ ಮಕ್ಕಳ ಆರೋಗ್ಯದ ಕಡೆ ಹೆಚ್ಚಿನ ನಿಗಾ ಇರಿಸಿಕೊಳ್ಳಬೇಕೆಂದು ಸಚಿವರು ತಿಳಿಸಿದ್ದಾರೆ.

# ಹಳ್ಳಿಗಳಲ್ಲಿ ಗ್ರಂಥಾಲಯ ತೆರೆದರೆ ಮನೆಗೊಬ್ಬ ಅಂಬೇಡ್ಕರ್ ಜನಿಸುತ್ತಾರೆ: ಭಾರತಿ



**ಚೇಳೂರು, ಮೇ.23–** ಪ್ರತಿಯೊಂದು ಗ್ರಾಮದಲ್ಲೂ ಗ್ರಂಥಾಲಯಗಳನ್ನು ತೆರೆದಾಗ ವಿದ್ಯಾವಂತರ ಸಂಖ್ಯೆ ಹೆಚ್ಚುತ್ತದೆ, ಮನೆಗೊಬ್ಬ ಅಂಬೇಡ್ಕರ್ ಹುಟ್ಟುತ್ತಾರೆ ಎಂದು ತುಮುಲ್ ನಿರ್ದೇಶಕಿ ಭಾರತಿ ಶ್ರೀನಿವಾಸ್ ಹೇಳಿದರು.

ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಯ ಕೊಡಿಯಾಲ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಮತ್ತು ಡಾ. ಬಾಬು ಜಗಜೀವನ್ ರಾಮ್ ನಾಮ ಫಲಕದ ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದಲ್ಲಿ ಶೋಷಿತ ಸಮುದಾಯಗಳು ಮೌಢ್ಯತೆಯಿಂದ ಹೊರ ಬಂದು ದೇವಾಲಯಗಳನ್ನು ಕಟ್ಟುವ ಬದಲು ಗ್ರಂಥಾಲಯಗಳನ್ನು ಸ್ಥಾಪನೆ ಮಾಡಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದರೆ ಹೊಸ ಸಮಾಜ ನಿರ್ಮಾಣವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಯುವಕರು ದುಶ್ಚಟಗಳಿಗೆ ಬಲಿಯಾಗುತ್ತಿದ್ದು, ಇದರಿಂದ ಹೊರಬಂದು ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಬೇಕು. ಶಿಕ್ಷಣದಿಂದ ಸದೃಢ ಗ್ರಾಮ ಹಾಗೂ ಸದೃಢ ರಾಷ್ಟ್ರ ಹಾಗೂ ಸಮಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಡಿಎಸ್‌ಎಸ್ ಮುಖಂಡ ಚೇಳೂರು ಶಿವನಂಜಪ್ಪ ಮಾತನಾಡಿ, ಶಾಸಕ ಶ್ರೀನಿವಾಸ್ ಮತ್ತು ಅವರ ಧರ್ಮ ಪತ್ನಿ ಇಂದಿಗೂ ದಲಿತರನ್ನು ನಮ್ಮ ಮನೆ ಮಕ್ಕಳಂತೆ ಕಾಣುತ್ತಾರೆ. ದಲಿತರು ಅವರ ಮನೆ ಬಾಗಿಲಿಗೆ ಹೋದರೆ ಊಟ ಮಾಡಿಸದೆ ಕಳುಹಿಸುವುದಿಲ್ಲ, ಶಾಸಕರ ಕುಟುಂಬ ದಲಿತರ ಮೇಲೆ ಇಟ್ಟಿರುವ ಕಾಳಜಿ ತುಂಬಾ ಗೌರವನ್ವಿತ ಎಂದರು.

ಇದೇ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ದಲಿತ ಮುಖಂಡ ಕೊಡಿಯಾಲ ಮಾದೇವ, ಕೀರ್ತಿರಾಜ್, ಬಸವರಾಜು, ಮುಖಂಡರಾದ ಅರೇಹಳ್ಳಿ ಮಂಜುನಾಥ್, ಪದ್ಮ, ಪಾಂಡು, ರಾಮಕೃಷ್ಣಯ್ಯ, ರಮೇಶ್, ನರಸಿಂಹಮೂರ್ತಿ ನಿರಂಜನಮೂರ್ತಿ ಮತ್ತಿತರರು ಭಾಗವಹಿಸಿದ್ದರು.

# ಒತ್ತುವರಿ ತೆರುವು ಕುರಿತು ಕೆಲವೇ ಗಂಟೆಗಳಲ್ಲಿ ಸಿಎಂ ಉಲ್ಟಾ



**ಬೆಂಗಳೂರು, ಮೇ.23–** ನಗರದಲ್ಲಿ ಮಳೆ ಅನಾಹುತಕ್ಕೆ ಕಾರಣವಾಗಿರುವ ಒತ್ತುವರಿಯನ್ನು ಯಾರೇ ಮಾಡಿದ್ದರೂ ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಿ ಎಂದು ಘಂಟಾಘೋಷವಾಗಿ ಘೋಷಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿಕೆ ನೀಡಿದ ಕೆಲವೇ ಗಂಟೆಗಳಲ್ಲಿ ಉಲ್ಟಾ ಹೊಡೆಯಲು ಕಾರಣವೇನು? ಎಂಬುದನ್ನು ಬಹಿರಂಗಪಡಿಸಬೇಕು ಎಂದು ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಅಧ್ಯಕ್ಷ ಹಾಗೂ ಮಾಜಿ ಉಪ ಮೇಯರ್ ಎಸ್.ಹರೀಶ್ ಪ್ರಶ್ನಿಸಿದ್ದಾರೆ.

ನಿನ್ನೆ ನಗರ ಪ್ರದಕ್ಷಿಣೆ ನಡೆಸಿದ್ದ ಸಿಎಂ ಸಿದ್ದರಾಮಯ್ಯ ಅವರು ರಾಜಕಾಲುವೆ ಒತ್ತುವರಿದಾರರು ಎಷ್ಟೆ ಪ್ರಭಾವಿಗಳಾಗಿದ್ದರೂ ಯಾವುದೇ ಮುಲಾಜಿಗೆ ಒಳಗಾಗದೇ ತೆರವುಗೊಳಿಸಿ ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಅವರು ಈ ಹೇಳಿಕೆ ನೀಡಿದ ಒಂದೇರಡು ಗಂಟೆಯೊಳಗೆ ನಗರದ ಮಾನ್ಯತಾ ಟೆಕ್ ಪಾರ್ಕ್ ಮಾಡಿಕೊಂಡಿರುವ ಒತ್ತುವರಿಯನ್ನು ಸಂಸ್ಥೆಯವರೇ ತೆರವುಗೊಳಿಸುತ್ತಾರೆ ಅವರಿಗೆ 90 ದಿನಗಳ ಗಡುವು ನೀಡುವಂತೆ ಸಿಎಂ ಹೇಳಿದ್ದಾರೆ. ಅವರ ತಕ್ಷಣದ ಈ ಬದಲಾವಣೆಗೆ ಕಾರಣವೇನು ಎಂಬುದರ ನಿಗೂಢ ಸಾರ್ವಜನಿಕರಿಗೆ ಅರ್ಥವಾಗಬೇಕು ಎಂದು ಹರೀಶ್ ಪತ್ರಿಕಾ ಹೇಳಿಕೆಯಲ್ಲಿ ಕೇಳಿದ್ದಾರೆ.

ಕಾಂಗ್ರೆಸ್ ಸರ್ಕಾರದಲ್ಲಿ ಇಂಧನ ಸಚಿವರಾಗಿರುವ ಕೆ.ಜೆ.ಜಾರ್ಜ್ ಅವರಿಗೆ ಸೇರಿದ ಎಂಬೆಸ್ಸಿ ಸಂಸ್ಥೆ ಇರುವುದು ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಹೀಗಾಗಿ ಅವರಿಗೆ 90 ದಿನಗಳ ಅವಕಾಶ ನೀಡಿರುವ ಉದ್ದೇಶ ನಮಗೆ ಅರ್ಥವಾಗುತ್ತದೆ ಎಂದು ಹರೀಶ್ ಸಿಎಂ ಅವರ ಕಾಲೆಳೆದಿದ್ದಾರೆ.

ತಲೆ ಮೇಲೆ ಸೂರಿಲ್ಲದವರು ರಾಜಕಾಲುವೆ ಸಮೀಪ ನಿರ್ಮಿಸಿಕೊಳ್ಳುವ ಬಡವರ ಮನೆಗಳನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಿ ದರ್ಪ ಮೆರೆಯುವ ಬಿಬಿಎಂಪಿ ಅಧಿಕಾರಿಗಳು ಬಲಿಷ್ಠರ ಒತ್ತುವರಿಗಳನ್ನು ಏಕೆ ತೆರವುಗೊಳಿಸುತ್ತಿಲ್ಲ ಎನ್ನುವುದು ನಿಮ ಹೇಳಿಕೆಯಿಂದ ದೃಢಪಟ್ಟಿದೆ ಎಂದು ಅವರು ಹೇಳಿದ್ದಾರೆ.

ರಾಜರಾಜೇಶ್ವರಿನಗರ ಸುತ್ತಮತ್ತ ರಾಜಕಾಲುವೆ ಒತ್ತುವರಿ ಮಾಡಿಕೊಂಡಿದ್ದ ಬಡವರ ಮನೆಗಳ ಮೇಲೆ ಜೆಸಿಬಿ ನುಗ್ಗಿಸಿದ್ದ ನಿಮ ಅಧಿಕಾರಿಗಳು ಒತ್ತುವರಿ ಮಾಡಿಕೊಂಡಿದ್ದ ಕಾಂಗ್ರೆಸ್‌ನ ಹಿರಿಯ ಮುಖಂಡ ಶ್ಯಾಮನೂರು ಶಿವಶಂಕರಪ್ಪ ಒಡೆತನದ ಆಸ್ಪತ್ರೆ ಹಾಗೂ ಚಿತ್ರನಟ ದರ್ಶನ್ ಮಾಡಿಕೊಂಡಿರುವ ಒತ್ತುವರಿಯನ್ನು ತೆರವುಗೊಳಿಸದೆ ಅವರಿಗೆ ಕೇವಲ ಕಾರಣ ಕೇಳಿ ನೋಟೀಸ್ ನೀಡಿದ್ದು ಯಾವ ಪುರುಷಾರ್ಥಕ್ಕೆ ಎಂದು ಅವರು ಪ್ರಶ್ನಿಸಿದ್ದಾರೆ.

ಕಳೆದ ಹಲವಾರು ವರ್ಷಗಳಿಂದಲೂ ಮಳೆಗಾಲದಲ್ಲಿ ಸಾಯಿ ಬಡಾವಣೆ ಜಲಾವೃತವಾಗುತ್ತಿದ್ದರೂ ಅದಕ್ಕೆ ಕಾರಣವಾದ ಒತ್ತುವರಿ ತೆರವುಗೊಳಿಸದೆ ತೆಪ್ಪಗಿರುವುದು ಯಾರನ್ನು ಮೆಚ್ಚಿಸಲಿಕ್ಕೆ ಎನ್ನುವುದನ್ನು ಬಹಿರಂಗಪಡಿಸಬೇಕು ಎಂದು ಅವರು ಸವಾಲು ಹಾಕಿದ್ದಾರೆ.

# ಅರಮನೆ ಮೈದಾನ ಟಿಡಿಆರ್ ಪಾವತಿಗೆ ಸುಪ್ರೀಂ ಸೂಚನೆ

**ನವದೆಹಲಿ,ಮೇ.23–**:ಬೆಂಗಳೂರಿನ ಬಳ್ಳಾರಿ ರಸ್ತೆ ಮತ್ತು ಜೈಮಹಲ್ ರಸ್ತೆಗಳ ವಿಸ್ತರಣೆ ಕುರಿತಂತೆ ಸ್ವಾಧೀನಪಡಿಸಿಕೊಂಡಿರುವ ಅರಮನೆ ಮೈದಾನದ 15 ಎಕರೆಗೂ ಹೆಚ್ಚು ಭೂಮಿಗೆ 3,400 ಕೋಟಿಯ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕ(ಟಿಡಿಆರ್) ನ್ನು ತಕ್ಷಣ ಮೈಸೂರು ರಾಜವಂಶಸ್ಥರಿಗೆ ನೀಡುವಂತೆ ಸುಪ್ರೀಂಕೋರ್ಟ್ ಇಂದು ಮಹತ್ವದ ತೀರ್ಪು ನೀಡಿದೆ. ಇದರಿಂದಾಗಿ ರಾಜ್ಯಸರ್ಕಾರಕ್ಕೆ ಕಾನೂನು ಸಮರದಲ್ಲಿ ತೀವ್ರ ಹಿನ್ನಡೆಯುಂಟಾಗಿದೆ.

ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳಾದ ಎಂ.ಎಂ ಸುಂದರೇಶ್ ಮತ್ತು ಅರವಿಂದ ಕುಮಾರ್ ಅವರನ್ನೊಳಗೊಂಡ ದ್ವಿಸದಸ್ಯ ಪೀಠವು ಒಂದು ವಾರದೊಳಗೆ ಟಿಡಿಆರ್ ಠೇವಣಿ ಇಡಬೇಕೆಂದು ಈ ಮೊದಲು ರಾಜ್ಯಸರ್ಕಾರಕ್ಕೆ ನಿರ್ದೇಶನ ನೀಡಿತ್ತು.

3,400 ಕೋಟಿ ರೂ.ಗಳ ಟಿಡಿಆರ್‌ನ್ನು ಸುಪ್ರೀಂಕೋರ್ಟ್‌ನಲ್ಲಿ ರಾಜ್ಯಸರ್ಕಾರ ಠೇವಣಿ ಇಟ್ಟಿತ್ತು. ಈ ಟಿಡಿಆರ್‌ಗಳನ್ನು ರಾಜವಂಶಸ್ಥರಿಗೆ ಹಸ್ತಾಂತರ ಮಾಡಬಾರದೆಂದು ಅರ್ಜಿಯಲ್ಲಿ ರಾಜ್ಯಸರ್ಕಾರ ಮನವಿ ಮಾಡಿತ್ತು.

ಸುಪ್ರೀಂಕೋರ್ಟ್ ರಿಜಿಸ್ಟ್ರಾರ್‌ನಲ್ಲಿ ರಾಜ್ಯಸರ್ಕಾರ ಟಿಡಿಆರ್ ಇಟ್ಟಿತ್ತು.ಆದರೆ, ಇದಕ್ಕೆ ರಾಜಮನೆತನದ ಪರ ವಕೀಲರು ವಿರೋಧ ವ್ಯಕ್ತಪಡಿಸಿದ್ದರು. ರಿಜಿಸ್ಟ್ರಾರ್‌ನಲ್ಲಿ ಟಿಡಿಆರ್ ಇರಬೇಕು ಎಂದು ಸರ್ಕಾರ ವಾದಿಸಿತ್ತು. ಈಗ ಅಂತಿಮವಾಗಿ ಸುಪ್ರೀಂಕೋರ್ಟ್‌ನ ನ್ಯಾಯಾಧೀಶರಾದ ಅರವಿಂದಕುಮಾರ್ ಒಳಗೊಂಡ ದ್ವಿಸದಸ್ಯ ಪೀಠ ಟಿಡಿಆರ್‌ನ್ನು ಅಂತಿಮವಾಗಿ ರಾಜಮನೆತನಕ್ಕೆ ನೀಡಲು ಸೂಚನೆ ನೀಡಿದೆ.

ಈ ಭೂಮಿಯ ಮೇಲೆ ರಾಜಮನೆತಕ್ಕೆ ಹಕ್ಕಿಲ್ಲ ಎಂಬ ರಾಜ್ಯಸರ್ಕಾರ ಸಲ್ಲಿಸಿರುವ ಅರ್ಜಿ ವಿಚಾರಣೆ ಇನ್ನೂ ಬಾಕಿ ಉಳಿದಿದ್ದು, ಅಂತಿಮ ಆದೇಶಕ್ಕೆ ಒಳಪಟ್ಟು ಟಿಡಿಆರ್ ಸ್ವೀಕರಿಸಲು ಸೂಚನೆ ನೀಡಲಾಗಿದೆ.

ಈ ಹಿಂದೆ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ತೀರ್ಪನ್ನು ಇಂದಿಗೆ ಕಾಯ್ದಿರಿಸಿತ್ತು. ಈ ಟಿಡಿಆರ್‌ಗಳನ್ನು ರಾಜವಂಶಸ್ಥರಿಗೆ ಹಸ್ತಾಂತರ ಮಾಡಬಾರದೆಂದು ರಾಜ್ಯಸರ್ಕಾರ ಸಲ್ಲಿಸಿದ್ದ ಮಧ್ಯಂತರ ಅರ್ಜಿಯಲ್ಲಿ ಮನವಿ ಮಾಡಿತ್ತು.

ಅರಮನೆ ಮೈದಾನ ಒಟ್ಟು 472 ಎಕರೆ 16 ಗುಂಟೆ ಜಾಗ ಹೊಂದಿದೆ. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಕಾನೂನುಬದ್ಧ ಉತ್ತರಾಧಿಕಾರಿ ಮತ್ತು ಇತರರು ಸಲ್ಲಿಸಿದ ನ್ಯಾಯಾಂಗ ನಿಂದನೆ ಅರ್ಜಿಗಳು ಮತ್ತು ಇತರ ಪ್ರಕರಣಗಳ ಕುರಿತು ಸುಪ್ರೀಂಕೋರ್ಟ್ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು.

ಈ ಆದೇಶದ ಪ್ರಕಾರ ಕರ್ನಾಟಕ ಸ್ಟಾಂಪ್ ಕಾಯ್ದೆಯ ಸೆಕ್ಷನ್–45 ಬಿಗೆ ಅನುಗುಣವಾಗಿ ಅರಮನೆ ಮೈದಾನಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯಕ್ಕನುಗುಣವಾಗಿ ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿಅರಮನೆ ಜಾಗವನ್ನು ಮೌಲ್ಯೀಕರಿಸಿ ವರ್ಗಾವಣೆ ಮಾಡಬಹುದಾದ ಟಿಡಿಆರ್ ನೀಡುವಂತೆ ನಿರ್ದೇಶನ ನೀಡಿತ್ತು.

ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಬಳಕೆಯಾಗುವ 15.36 ಎಕರೆ ಭೂಮಿಗೆ ಪರಿಹಾರವಾಗಿ 3,014 ಟಿಡಿಆರ್ ನೀಡಬೇಕು ಎಂದು ಸುಪ್ರೀಂಕೋರ್ಟ್ ಡಿಸೆಂಬರ್‌ನಲ್ಲಿ ಆದೇಶಿಸಿತ್ತು.

## ಕನಸಿಲ್ಲದ ಕುದುರೆ

ಕನಸಿಲ್ಲದ ಕುದುರೆ
ಓಡುತಲಿರುವುದು
ಕನಸಿಗಾಗಿ।
ಯಾರಿಗಾಗಿ?
ಎತ್ತಕ್ಕಾಗಿ?

ಕನಸಿಲ್ಲದ ಕುದುರೆ
ಅತ್ತಲ್ಲಿತ್ತ ಬಾಗಿ
ಕಾಯುತ್ತಿರುವುದು
ಬೀಳದ ಕನಸಿಗಾಗಿ
ನಿಲ್ಲದ ಮನಸ್ಸಿಗಾಗಿ

ಕನಸ್ಸಿಲ್ಲದ ಕುದುರೆ
ನೋಡುತ್ತಿರುವುದು
ನೋಡದವರಿಗಾಗಿ
ಕೂಡಿದವರಾಗಿ
ಕೂಡಿ ಹಾಡಿದವರಿಗಾಗಿ

ಕನಸಿಲ್ಲದ ಕುದುರೆ
ಮುನ್ನಿಸಿಕೊಂಡಿಲ್ಲ
ಬಿದ್ದ ಕನಸಿಗಾಗಿ
ಗೆದ್ದ ಕುದುರೆಗಾಗಿ
ನಿದ್ದೆ ಬಾರದಕ್ಕಾಗಿ

ರಚನೆ
ಮುರಗೆಪ್ಪ.ಆರ್.ಹೆಚ್.
ಹಣಮನಹಳ್ಳಿ,ಸೇಡಂ,ಕಲಬುರಗಿ
9900101903

# ಖರ್ಗೆಯವರ ಮಾತುಗಳು ಹತಾಶೆಯಿಂದ ಕೂಡಿವೆ : ಕಲ್ಯಾಣಸ್ವಾಮಿ



**ಬಳ್ಳಾರಿ, ಮೇ.,23–** ಪರಿಶಿಷ್ಟ ಪಟ್ಟಿಯಲ್ಲಿನ ಬೇಡಜಂಗಮರಿಗೆ ಸಾಂವಿಧಾನಿಕ ನ್ಯಾಯ ಸಿಗಲೇಬೇಕು. ಇದರಲ್ಲಿ ಯಾರಿಗೂ ಅನುಮಾನವೇ ಇಲ್ಲ. ಅವರಿಗೆ ಸ್ವಾತಂತ್ರ್ಯ ಸಿಕ್ಕಾಗಿನಿಂದಲೂ ಮೀಸಲಾತಿ ವಂಚಿಸಲಾಗಿದೆ. ಆದರೆ ಈ ಬಗ್ಗೆ ಈವರೆಗೆ ಯಾವ ರಾಜಕಾರಣಿ, ಬುದ್ಧಿಜೀವಿಯೂ ಕನಿಕರ ವ್ಯಕ್ತಪಡಿಸಲಿಲ್ಲ

ಆದರೆ ಈಗ ಮಲ್ಲಿಕಾರ್ಜುನ ಖರ್ಗೆಯವರು ಹೇಳುವ 500 ಸಂಖ್ಯೆಯವರು ಎಲ್ಲಿದ್ದಾರೆ. ಅವರಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ವಿತರಿಸಲಾಗಿದೆಯೇ. ವೀರಶೈವ ಲಿಂಗಾಯತ ಜಂಗಮರಿಗೆ. ವೀರಶೈವ ಲಿಂಗಾಯತ ಎಂದು ಸುಳ್ಳು ಜಾತಿ ಪ್ರಮಾಣಪತ್ರ ಏಕೆ ಸರ್ಕಾರ ಕೊಡುತ್ತದೆ ಎಂದು ಹೇಳಿದ್ದಾರೆ. ಇದು ಅವರ ಅಸಂಬದ್ಧ ಮತ್ತು ಹತಾಶೆಯಿಂದ ಕೂಡಿರುವ ಮಾತಾಗಿದೆಂದು ನಗರದ ಕಲ್ಯಾಣಸ್ವಾಮಿ ಮಠದ ಶ್ರೀಗಳು ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಜಂಗಮ ಜಾತಿಯು 1921 ರ ನಿಜಾಮ್ ಸರ್ಕಾರದ ಡಿಪ್ರೆಸ್ಡ್ ಕ್ಲಾಸ್ ಪಟ್ಟಿಯಲ್ಲಿಯೂ, 1936 ರ ಮಹಾರಾಷ್ಟ್ರ ಭಂಡಾರ ಜಿಲ್ಲೆಯ ಪರಿಶಿಷ್ಟ ಪಟ್ಟಿಯಲ್ಲಿಯೂ, (ಇದಕ್ಕೆ ಭಾರತ ಸಂವಿಧಾನದ ಆರ್ಟಿಕಲ್ 147 ಮಹತ್ತರ ಪುಷ್ಟಿ ಒದಗಿಸುತ್ತದೆ.) 1949 ರ ನಿಜಾಮ್ ಸರ್ಕಾರ (ಇನ್ನೂ ಭಾರತ ಗಣರಾಜ್ಯದಲ್ಲಿ ಸೇರಿರಲಿಲ್ಲ) ಪರಿಶಿಷ್ಟರ ಮಂದಿರ ಪ್ರವೇಶ ಕಾಯ್ದೆಯಲ್ಲಿ ದಲಿತ ವರ್ಗದ ಪಟ್ಟಿಯಲ್ಲಿ ಜಂಗಮ ಜಾತಿಯನ್ನೂ ಸೇರ್ಪಡೆಗೊಳಿಸಿದ್ದಾರೆ..

ಇವೆಲ್ಲ ಸ್ವತಂತ್ರಪೂರ್ವ ದಾಖಲೆಗಳು. ಇವುಗಳಿಗೆಲ್ಲ ಹೆಚ್ಚಿನ ಪಾವಿತ್ರ್ಯತೆ ಇದೆ.. ಇಂತಹ ದಾಖಲೆಗಳನ್ನು ಮಾನ್ಯ ಸುಪ್ರೀಂ ಕೋರ್ಟ್ ಬೇರೆ ಪ್ರಕರಣದಲ್ಲಿ ಉಲ್ಲೇಖಿಸಿದೆ.. ಈ ಎಲ್ಲ ನೂರಾರು ಪುಟಗಳ ದಾಖಲೆಗಳು ಸರ್ಕಾರದ ಸಮಾಜ ಕಲ್ಯಾಣ ಇಲಾಖೆಗೆ ಆ ಸಮಾಜ ಸಂಘಟನೆಗಳು ಹಲವಾರು ಬಾರಿ ಕೊಟ್ಟಿದ್ದಿದೆ. ಅವನ್ನು ಖರ್ಗೆಯವರು ಪಡೆದುಕೊಳ್ಳಲಿ ಅಥವಾ ಸರ್ಕಾರದ ಪ್ರತಿನಿಧಿಗಳಾಗಲಿ ಪೂರೈಸಲಿ.! ಮತ್ತು ನಾಡಿನ ಎಲ್ಲ ಜನರಿಗೆ ದೊರೆಯುವಂತೆ ಮಾಡಲಿ. ಜನರಿಗೆ ಸತ್ಯ ಗೊತ್ತಾಗಲಿ ಎಂದಿರುವ ಶ್ರೀಗಳು. ಯಾರೂ, ಯಾರ ಹಕ್ಕನ್ನೂ ಕಸಿಯುವ ಪ್ರಶ್ನೆ ಉದ್ಭವಿಸುವುದಿಲ್ಲ, ಬದಲಾಗಿ, ಬೇಡಜಂಗಮರ ಮತ್ತು ವೀರಶೈವ ಲಿಂಗಾಯತ ಜಂಗಮರ ಹಕ್ಕುಗಳು ಸ್ವಾತಂತ್ರ್ಯಾಲಭ್ಯದಿಂದಲೂ ಕಸಿಯಲ್ಪಟ್ಟಿರುವುದು ಸತ್ಯ ಎಂದಿದ್ದಾರೆ.

# ಆಪರೇಷನ್ ಸಿಂಧೂರ್ ಇನ್ನೂ ಮುಗಿದಿಲ್ಲ : ಜೈಶಂಕರ್



**ನವದೆಹಲಿ,ಮೇ.23–** ಭಯೋತ್ಪಾದಕರು ಪಾಕಿಸ್ತಾನದಲ್ಲಿದ್ದರೆ, ಅವರಿರುವ ಸ್ಥಳದಲ್ಲಿಯೇ ನಾವು ಅವರನ್ನು ಹೊಡೆಯುತ್ತೇವೆ. ಆದ್ದರಿಂದ ಕಾರ್ಯಾಚರಣೆಯನ್ನು ಮುಂದುವರಿಸುವುದರಲ್ಲಿ ಒಂದು ಸಂದೇಶವಿದೆ. ಕಾರ್ಯಾಚರಣೆಯನ್ನು ಮುಂದುವರಿಸುವುದು ಎಂದರೆ ಪರಸ್ಪರ ಗುಂಡು ಹಾರಿಸುವುದಕ್ಕೆ ಸಮಾನವಲ್ಲ. ಇದೀಗ, ಹೋರಾಟ ಮತ್ತು ಮಿಲಿಟರಿ ಕಾರ್ಯಾಚರಣೆಯನ್ನು ನಿಲ್ಲಿಸಲು ಒಪ್ಪಿಗೆ ಇದೆ ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ನವದೆಹಲಿಯಲ್ಲಿ ಹೊಂಡುರಾಸ್ ರಾಯಭಾರ ಕಚೇರಿಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪಾಕಿಸ್ತಾನದಿಂದ ಕಾರ್ಯನಿರ್ವಹಿಸುತ್ತಿರುವ ಭಯೋತ್ಪಾದಕರ ಮೇಲೆ ಭಾರತ ಪ್ರತಿಕ್ರಿಯಿಸುತ್ತದೆ ಎಂಬ ಕಾರಣಕ್ಕಾಗಿ ಆಪರೇಷನ್ ಸಿಂಧೂರ್ ಮುಂದುವರೆದಿದೆ ಎಂದು ಹೇಳುವ ಮೂಲಕ ಗಡಿಯಾಚೆಗಿನ ಭಯೋತ್ಪಾದನೆಯನ್ನು ಎದುರಿಸಲು ಭಾರತ ಹೊಸ ವಿಧಾನವನ್ನು ಹೇಗೆ ಅನುಸರಿಸುತ್ತದೆ ಎಂಬುದನ್ನು ವಿವರಿಸಿದ್ದಾರೆ.

ಭಾರತದ ದಾಳಿಗಳು ಪಾಕಿಸ್ತಾನಿ ಸೇನೆಯು ಪರಸ್ಪರ ಗುಂಡು ಹಾರಿಸುವುದನ್ನು ನಿಲ್ಲಿಸಬೇಕು ಎಂದು ಒಪ್ಪಿಕೊಳ್ಳುವಂತೆ ಮಾಡಿದ ನಂತರ ಮೇ 10ರಂದು ಮಿಲಿಟರಿ ಕಾರ್ಯಾಚರಣೆಗಳನ್ನು ನಿಲ್ಲಿಸುವ ಬಗ್ಗೆ ಒಪ್ಪಂದವನ್ನು ಭಾರತ ಮತ್ತು ಪಾಕಿಸ್ತಾನ ದ್ವಿಪಕ್ಷೀಯವಾಗಿ ತಲುಪಿದವು. ಈ ತಿಳಿವಳಿಕೆಯಲ್ಲಿ ಅಥವಾ ಪಾಕಿಸ್ತಾನದೊಂದಿಗಿನ ಯಾವುದೇ ಸಂಭಾವ್ಯ ಮಾತುಕತೆಗಳಲ್ಲಿ ಅಮೆರಿಕದ ಯಾವುದೇ ಪಾತ್ರವನ್ನು ಅವರು ನಿರಾಕರಿಸಿದರು.

ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಪಾಕಿಸ್ತಾನ ನಿಯಂತ್ರಿತ ಪ್ರದೇಶಗಳಲ್ಲಿ ಒಂಬತ್ತು ಭಯೋತ್ಪಾದಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು 26 ನಾಗರಿಕರು ಸಾವನ್ನಪ್ಪಿದ್ದಕ್ಕೆ ಪ್ರತೀಕಾರವಾಗಿ ಭಾರತ ಮೇ 7 ರಂದು ಆಪರೇಷನ್ ಸಿಂಧೂರ್ ಅನ್ನು ಪ್ರಾರಂಭಿಸಿತು. ಇದು ನಾಲ್ಕು ದಿನಗಳ ತೀವ್ರ ಘರ್ಷಣೆಗೆ ಕಾರಣವಾಯಿತು, ಎರಡೂ ಕಡೆಯವರು ಡ್ರೋನ್‌ಗಳು, ಕ್ಷಿಪಣಿಗಳು ಮತ್ತು ದೀರ್ಘ-ಶ್ರೇಣಿಯ ಶಸಾಸಗಳನ್ನು ಬಳಸಿದರು, ನಂತರ ಎರಡೂ ಕಡೆಯವರು ಮಿಲಿಟರಿ ಕ್ರಮಗಳನ್ನು ನಿಲ್ಲಿಸಲು ಒಪ್ಪಿಕೊಂಡರು

ಏಪ್ರಿಲ್ 22ರಂದು ನಾವು ನೋಡಿದ ರೀತಿಯ ಕೃತ್ಯಗಳು ನಡೆದರೆ, ಭಯೋತ್ಪಾದಕರನ್ನು ಹೊಡೆದುರುಳಿಸುತ್ತೇವೆ ಎಂಬ ಪ್ರತಿಕ್ರಿಯೆ ಇರುತ್ತದೆ ಎಂಬ ಸ್ಪಷ್ಟ ಸಂದೇಶ ಆ ಕಾರ್ಯಾಚರಣೆಯಲ್ಲಿ ಇರುವುದರಿಂದ ಕಾರ್ಯಾಚರಣೆ ಮುಂದುವರೆದಿದೆ, ಇದು ಇನ್ನೂ ಮುಕ್ತಾಯಗೊಂಡಿಲ್ಲ ಎಂದು ಹೇಳಿದರು.

ಕಾರ್ಯಾಚರಣೆ ಸುಪ್ತವಾಗಿದೆಯೇ ಎಂದು ಕೇಳಿದಾಗ,: ನೀವು ಬಯಸುವ ಯಾವುದೇ ಪದವನ್ನು ಹಾಕಿ, ಆದರೆ ಸಂದೇಶ ಸ್ಪಷ್ಟವಾಗಿದೆ ಮತ್ತು ಸಂದೇಶವು ಕಾರ್ಯನಿರ್ವಹಿಸಿದೆ ಎಂದು ನಾನು ನಿಮಗೆ ಹೇಳಬಲ್ಲೆ. ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಅತ್ಯಂತ ಬರ್ಬರ ಭಯೋತ್ಪಾದಕ ದಾಳಿಯಿಂದ ಈ ಹೋರಾಟ ಆರಂಭವಾಯಿತು, ಅಲ್ಲಿ 26 ಜನರನ್ನು ತಮ್ಮ ನಂಬಿಕೆಯನ್ನು ಖಚಿತಪಡಿಸಿಕೊಂಡ ನಂತರ ಅವರ ಕುಟುಂಬಗಳ ಮುಂದೆಯೇ ಕೊಲ್ಲಲಾಯಿತು. ಕಾಶ್ಮೀರದ ಆರ್ಥಿಕತೆಯ ಆಧಾರಸ್ತಂಭವಾಗಿರುವ ಪ್ರವಾಸೋದ್ಯಮಕ್ಕೆ ಹಾನಿ ಮಾಡುವುದು ಮತ್ತು ಧಾರ್ಮಿಕ ವೈಷಮ್ಯವನ್ನು ಸೃಷ್ಟಿಸುವುದು ಈ ದಾಳಿಯ ಉದ್ದೇಶವಾಗಿತ್ತು ಎಂದರು.

ಉದ್ದೇಶಪೂರ್ವಕವಾಗಿ, ಧರ್ಮದ ಅಂಶವನ್ನು ಪರಿಚಯಿಸಲಾಗಿದೆ.,ನೀವು ಪಾಕಿಸ್ತಾನಿ ನಾಯಕತ್ವವನ್ನು ಹೊಂದಿದ್ದೀರಿ, ವಿಶೇಷವಾಗಿ ಸೇನಾ ಮುಖ್ಯಸ್ಥರು ತೀವ್ರ ಧಾರ್ಮಿಕ ದೃಷ್ಟಿಕೋನದಿಂದ ನಡೆಸಲ್ಪಡುತ್ತಾರೆ ಎಂಬುದನ್ನು ನೀವು ನೋಡಬೇಕು. ವ್ಯಕ್ತಪಡಿಸಿದ ಅಭಿಪ್ರಾಯಗಳು ಮತ್ತು ಮಾಡಿದ ನಡವಳಿಕೆಯ ನಡುವೆ ಸ್ಪಷ್ಟವಾಗಿ ಕೆಲವು ಸಂಪರ್ಕವಿದೆ,ಎಂದು ಅವರು ಪಹಲ್ಗಾಮ್‌ದಾಳಿಗೆ ಒಂದು ವಾರದ ಮೊದಲು ಪಾಕಿಸ್ತಾನ ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಅವರ ದ್ವಿರಾಷ್ಟ್ರ ಸಿದ್ಧಾಂತದ ಬಗ್ಗೆ ಹೇಳಿಕೆಗಳನ್ನು ಅವರು ಉಲ್ಲೇಖಿಸಿದರು.

ಭಯೋತ್ಪಾದನೆಯನ್ನು ಕೊನೆಗೊಳಿಸುವುದು ಮತ್ತು ನೆರೆಯ ದೇಶವು ಅಕ್ರಮವಾಗಿ ಆಕ್ರಮಿಸಿಕೊಂಡಿರುವ ಕಾಶ್ಮೀರದ ಭಾಗವನ್ನು ಹಿಂದಿರುಗಿಸುವುದು ಮಾತ್ರ ಭಾರತ ಪಾಕಿಸ್ತಾನದೊಂದಿಗೆ ಚರ್ಚಿಸಲು ಸಿದ್ಧವಿರುವ ವಿಷಯಗಳೆಂದು ಜೈಶಂಕರ್ ಹೇಳಿದರು. ಕಾಶ್ಮೀರದಲ್ಲಿನ ಗಡಿಗಳು ಮಾತುಕತೆಗೆ ಅರ್ಹವಲ್ಲ. ಏಕೆಂದರೆ ಕಾಶ್ಮೀರ ಭಾರತದ ಭಾಗವಾಗಿದೆ ಎಂದು ಹೇಳಿದರು.

# ಅಧಿಕಾರಿಗಳ ಸಮರ್ಪಕ ಕಾರ್ಯನಿರ್ವಹಿಸಲು ಲೋಕಾಯುಕ್ತ ಸಹಕಾರಿ



**ಭಾಲ್ಕಿ,ಮೇ.23–**ಎಲ್ಲಾ ಇಲಾಖೆಗಳಲ್ಲಿಯ ಅಧಿಕಾರಿಗಳು ಸಮರ್ಪಕವಾಗಿ ಕೆಲಸ ಮಾಡುವುದೇ ಲೋಕಾಯುಕ್ತ ಕಾಯಿದೆಯ ಮೂಲ ಉದ್ದೇಶವಾಗಿದೆ ಎಂದು ಕಲಬುರಗಿ ಲೋಕಾಯುಕ್ತ ಎಸ್.ಪಿ, ಬಿ.ಕೆ.ಉಮೇಶ ಹೇಳಿದರು. ಪಟ್ಟಣದ ತಾ.ಪಂ. ಸಭಾಂಗಣದಲ್ಲಿ ಬುಧವಾರ ಲೋಕಾಯುಕ್ತ ಕಚೇರಿಯ ವತಿಯಿಂದ ಆಯೋಜಿಸಿದ್ದ ಸಾರ್ವಜನಿಕರ ಕುಂದು ಕೊರತೆ ಮತ್ತು ಅಹವಾಲು ಸ್ವೀಕಾರ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 2018ರ ತಿದ್ದುಪಡಿ ಅನುಸಾರ ಲೋಕಾಯುಕ್ತ ಕಾಯಿದೆಯಲ್ಲಿ ಸರ್ಕಾರಿ ನೌಕರರೂ ಲೋಕಾಯುಕ್ತರಿಗೆ ದೂರು ಸಲ್ಲಿಸಲು ಅವಕಾಶವಿದೆ.

ಅಧಿಕಾರಿಗು ಸಮರ್ಪಕವಾಗಿ ಕೆಲಸ ನಿರ್ವಹಿಸುವ ನಿಟ್ಟಿನಲ್ಲಿ ಲೋಕಾಯುಕ್ತ ಕಾಯಿದೆ ರೂಪಿಸಲಾಗಿದೆ. ಅಧಿಕಾರಿಗಳು ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ ನ್ಯಾಯಯುತ ಕಾರ್ಯ ನಿರ್ವಹಿಸಬೇಕು. ಹೆಚ್ಚಿನ ದೂರುಗಳು ಬುರುವುದಕ್ಕೆ ಅವಕಾಶ ಮಾಡಿಕೊಡಬಾರದರು. ದೂರುಗಳ ಅರ್ಜಿಗಳು ಆದಸ್ಟುಬೇಗ ವಿಲೇವಾರಿಯಾಗಬೇಕು. ಅಂದಾಗ ಮಾತ್ರ ಭ್ರಷ್ಟಾಚಾರ ನಿಯಮದ ಪ್ರಕಾರ ಕಾನೂನಿನ ರೀತಿಯಲ್ಲಿ ಕಾರ್ಯನಿರ್ವಸಲು ಸಾಧ್ಯವಾಗುತ್ತದೆ. ಅಧಿಕಾರಿಗಳು ತಮ್ಮ ತಮ್ಮ ಕಛೇರಿಗಳಲ್ಲಿ ಲೋಕಾಯುಕ್ತ ಫಲಕಗಳನ್ನು ಅಳವಡಿಸಿ ಕೊಳ್ಳಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬೀದರ ಲೋಕಾಯುಕ್ತ ಕಛೇರಿಯ ಡಿವೈಎಸ್‌ಪಿ ಹಣಮಂಥರಾಯ, ಲೋಕಾಯುಕ್ತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಛೇರಿಗಳಿಗೆ ಭೇಟಿ ನೀಡುವುದು, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲು ಲೋಕಾಯುಕ್ತ ಅಧಿಕಾರಿಗಳ ಮುಖ್ಯ ಕಾರ್ಯವಾಗಿದೆ. ಅಪೂರ್ಣ ಮಾಹಿತಿ ಇದ್ದರೆ, ಅರ್ಜಿಗಳನ್ನು ಪರಿಶೀಲಿಸಿ ಅರ್ಜಿಗಳನ್ನು ತಿರಸ್ಕರಿಸುವ ಅಧಿಕಾರವೂ ಲೋಕಾಯುಕ್ತರಿಗಿದೆ. ಭ್ರಷ್ಟಾಚಾರ ನಿರ್ಮೂಲನೆಯೇ ನಮ್ಮ ಮೂಲ ಉದ್ದೇಶವಾಗಿದೆ ಎಂದು ಹೇಳಿದರು. ಇದೇವೇಳೆ ಸಾರ್ವಜನಿಕರಿಂದ 5 ದೂರುಗಳು ಬಂದಿದ್ದು, ದೂರುಗಳ ಬಗ್ಗೆ ಸಮರ್ಪಕವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

# ಉಸಿರುಗಟ್ಟಿ ಕಾರ್ಮಿಕರಿಬ್ಬರ ಸಾವು

**ತುಮಕೂರು, ಮೇ.23–** ಕಾರ್ಖಾನೆಯೊಂದರ ಸಂಪ್ ಸ್ವಚ್ಛಗೊಳಿಸುವಾಗ ಉಸಿರುಗಟ್ಟಿ ಇಬ್ಬರು ಕಾರ್ಮಿಕರು ಮೃತಪಟ್ಟಿರುವ ಘಟನೆ ನಗರ ಹೊರವಲಯದ ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ನಡೆದಿದೆ. ಸಂಪ್ ಸ್ವಚ್ಛಗೊಳಿಸುವ ವೇಳೆ ನಾಲ್ವರು ಗಾಯಗೊಂಡಿದ್ದು, ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಲಾಗಿದೆ. ಸಿರಾ ತಾಲ್ಲೂಕಿನ ಮಾಗೋಡು ಗ್ರಾಮದ ಪ್ರತಾಪ್ (23) ಹಾಗೂ ಕಳ್ಳಂಬೆಳ್ಳ ಹೋಬಳಿ ತರೂರು ಗ್ರಾಮದ ವೆಂಕಟೇಶ್ (32) ಎಂಬುವರೇ ಮೃತಪಟ್ಟಿರುವ ದುರ್ದೈವಿ ಕಾರ್ಮಿಕರು.




ತರೂರಿನ ಮಂಜುನಾಥ್ (42), ಯುವರಾಜ್ (32) ಎಂಬುವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿದಿದೆ. ತರೂರಿನ ಭರತ್‌ಕುಮಾರ್ (36), ಬಿಹಾರದ ರಾಜೇಶ್‌ಕುಮಾರ್ (26) ಅಸ್ವಸ್ಥರಾಗಿದ್ದು, ಚಿಕಿತ್ಸೆಯ ನಂತರಚೇತರಿಸಿಕೊಂಡಿದ್ದಾರೆ. ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿರುವ ರಾಸಾಯನಿಕ ಪದಾರ್ಥ ತಯಾರಿಸುವ ಲಾರಸ್ ಬಯೋ ಎಂಬ ಕೈಗಾರಿಕೆಯಲ್ಲಿ ಈ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ರಾಸಾಯನಿಕ ಸಂಗ್ರಹಿಸುವ ಸಂಪ್ ಸ್ವಚ್ಛತೆಗಾಗಿ ಆರು ಜನ ಸಂಪ್ ಒಳಗೆ ಇಳಿದಿದ್ದರು. ಈ ವೇಳೆ ಉಸಿರುಗಟ್ಟಿ ಅಸ್ವಸ್ಥರಾಗಿದ್ದು, ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಇಬ್ಬರು ಸಾವನ್ನಪ್ಪಿದ್ದಾರೆ.ಈ ಸಂಬಂಧ ಕೋರ ಪೊಲೀಸರು ಪ್ರಕರಣ ದಾಖಲಾಗಿದೆ.

# ಶೀಘ್ರದಲ್ಲಿ ಬೀದರ ವಿಶ್ವವಿದ್ಯಾಲಯದಲ್ಲಿ ಸಂಗೀತ ವಿಭಾಗ ಪ್ರಾರಂಭ : ಕುಲಪತಿ


**ಬೀದರ:ಮೇ.23–**ಜಿಲ್ಲೆಯ ಶೈಕ್ಷಣಿಕ ವರದಾನವಾಗಿರುವ ಬೀದರ ವಿಶ್ವವಿದ್ಯಾಲಯದಲ್ಲಿ ಶೀಘ್ರದಲ್ಲಿ ನೂತನ ಸಂಗೀತ ವಿಭಾಗ ತೆರೆಯಲಾಗುವುದೆಂದು ಬೀದರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಎಸ್. ಬಿರಾದಾರ ಭರವಸೆ ನೀಡಿದರು. ಅವರು ಗೋರಟಾದ ಶ್ರೀ ಸಂಗೀತ ರುದ್ರೇಶ್ವರ ದೇವಾಲಯದಲ್ಲಿ ನಡೆದ ಶ್ರೀ ಸಂಗೀತ ರುದ್ರೇಶ್ವರ 3ನೇ ಜಾತ್ರಾ, ಪೂಜ್ಯರಾದ ವೀರಮ್ಮ ವಿರೂಪಾಕ್ಷಯ್ಯನವರ 13ನೇ ಪುಣ್ಯಸರಣೋತ್ಸವ, ಕಲ್ಯಾಣ ಕರ್ನಾಟಕ ಪ್ರಾಂತೀಯ 6ನೇ ಸಂಗೀತ ಮಹೋತ್ಸವ ಮತ್ತು ಪಂ. ವಿರೂಪಾಕ್ಷ ಸಮ್ಮಾನ್ ರಾಷ್ಟ್ರೀಯ ಪ್ರಶಸ್ತಿ ಸಮಾರಂಭದಲ್ಲಿ ಡಾ॥ ರಾಜಶೇಖರ ಶಿವಾಚಾರ್ಯರು ನಾಂದಿ ನುಡಿಯಲ್ಲಿ ಪ್ರಸ್ತಾಪಿಸಿದ ಬೀದರ ವಿ.ವಿ.ಯಲ್ಲಿ ಸಂಗೀತ ವಿಭಾಗ ತೆರೆಯಬೇಕೆಂಬ ಬೇಡಿಕೆಯನ್ನು ಮನ್ನಿಸಿ ಮೇಲಿನಂತೆ ನುಡಿದರು.

ಗೋರಟಾ ಚರಿತ್ರೆ ಬಹಳದೊಡ್ಡದು. ಇದು ಕಲೆ, ಸಾಹಿತ್ಯ, ಸಂಗೀತ ಬೀಡು, ಇಂದಿನ ವಿಶ್ವವಿದ್ಯಾಲಯ ಮಾದರಿಯಲ್ಲಿ ಘಟಿಕಾ ಸ್ಥಾನ ಹೊಂದಿದ್ದ ಕೇಂದ್ರ. ರಾಜಪೂಜಿತ ರುದ್ರೇಶ್ವರ ದೇವರ ಪ್ರತೀಕವಾಗಿ ಇಂದು ಪೂಜ್ಯ ಪಂ.ವಿರೂಪಾಕ್ಷ ಸ್ವಾಮಿಗಳ ಸತ್ ಸಂಕಲ್ಪದಂತೆ ಶ್ರೀ ಸಂಗೀತ ರುದ್ರೇಶ್ವರ ವಿರಾಜಮಾನವಾಗಿರುವುದು ನಮ್ಮೆಲ್ಲರ ಸೌಭಾಗ್ಯ ದೇಶಕ್ಕೆ ಸಂಗೀತ ಶ್ರೀ ರುದ್ರ ಬೆಳಕನ್ನಿತ್ತ ಪೂಜ್ಯ ವಿರೂಪಾಕ್ಷಯ್ಯನವರ ಸಂಸ್ಮರಣಾರ್ಥ ಪಂ. ವಿರೂಪಾಕ್ಷ ಸಮ್ಮಾನ್ ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿರುವುದು ನನ್ನ ಭಾಗ್ಯ ನನ್ನ ಉತ್ಸಾಹ ನೂರ್ಮಡಿಯಾಗಿದೆ.



ನನ್ನ ಒಂದು ವರ್ಷದ ಅವಧಿ ಮುಗಿಯುವುದರೊಳಗಾಗಿ ವಿಶ್ವವಿದ್ಯಾಲಯದಲ್ಲಿ ಸಂಗೀತ ವಿಭಾಗ ಖಂಡಿತವಾಗಿ ತೆರೆಯಲಾಗುವುದು. ಶ್ರೀಶೈಲದ ಪೂಜ್ಯ ಶ್ರೀ ಕರುಣಾದೇವಿ ಮಾತಾ ಹಾಗೂ ಗೋರಟಾ ಪೂಜ್ಯ ಗುರುಗಳಿಂದ ಉದ್ಘಾಟಿಸಲಾಗುವುದು ಎಂದು ಹೇಳಿದರಲ್ಲೇ ಸಂಗೀತಜ್ಞ ಡಾ॥ ಸಿದ್ಧರಾಮಯ್ಯ ಸ್ವಾಮಿ ಗೋರಟಾ ಆದಿಯಾಗಿ ಜಿಲ್ಲೆಯ ನುರಿತ ಕಲಾವಿದರ ಸೇವೆಯನ್ನು ಬಳಸಿಕೊಳ್ಳಲಾ ಗುವುದು ಎಂದು ಡಾ॥ ಬಿ.ಎಸ್. ಬಿರಾದಾರ ಹೇಳಿದರು. ಅಭಿನಂದನಾ ನುಡಿ ಸೇವೆಯನ್ನು ಮಾಡಿದ ಬೀದರ ವಿಶ್ವವಿ ದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ॥ ರಾಮಚಂದ್ರ ಗಣಾಪುರ ಮಾತನಾಡಿ ಗೋರಟಾ ಇತಿಹಾಸ ಪುಟಗಳಲ್ಲಿ ಚಿರಸ್ಥಾಯಿಯಾಗಿ ಹೆಸರು ಪಡೆದಿದೆ. ನಾಡಿನ ಕಲೆ, ಸಾಹಿತ್ಯ, ಸಂಗೀತಕ್ಕೆ ಅಪೂರ್ವ ಕೊಡುಗೆ ನೀಡಿದೆ. ಅಷ್ಟೇ ಅಲ್ಲ ಕಲ್ಯಾಣ ಕರ್ನಾಟಕ ವಿಮೋಚನಾ ಚಳುವಳಿಗೆ ತಾಯಿ ನೆಲವಾಗಿ ಸ್ವಾತಂತ್ರ ಹೋರಾಟಗಾರರ ಹುತಾತ್ಮರ ವೀರಭೂಮಿ ಯಾಗಿ ಯೂ ಪ್ರಸಿದ್ಧ ಪಡೆದಿದೆ. ಇದರ ಚರಿತ್ರೆ ಎಂದರೆ ಕಲ್ಯಾಣ ಕರ್ನಾಟಕ ಭಾಗದ ಚರಿತ್ರೆ ಎನ್ನುವಷ್ಟರ ಮಟ್ಟಿಗೆ ಸುವಿ ಖ್ಯಾತವಾಗಿದೆ. ಸಂಗೀತ ರುದ್ರ ಪಿತಾಮಹ ಪೂಜ್ಯ ವಿರೂಪಾಕ್ಷಯ್ಯ ಸ್ವಾಮಿಗಳವರು ಜಿಲ್ಲೆಯ ಸಂಗೀತದ ಅಧ್ವರ್ಯರು, ಜಿಲ್ಲೆಯ ಮೊದಲ ಸಂಗೀತ ಸ್ನಾತುಕೋತ್ತರ ಪದವಿಧರರು. ಅವರ ಜೀವನ ಚರಿತ್ರೆ ಎಂದರೆ ಜಿಲ್ಲೆಯ ಚರಿತ್ರೆಯ ಭಾಗವಾಗಿ ಅವರ ಜೀವನ ಸಂದೇಶ ನಾಡಿಗೆ ಅಮರ ಸಂದೇಶವಾಗಿದೆ. ಅವರು ಬರೆದ ಭುಲಾಯಿಪದ ಬೀದರ ಜಿಲ್ಲೆಯ ಪ್ರಥಮ ಕೃತಿಯಾಗಿದೆ. ಇಂದು ಪಂ. ವಿರೂಪಾಕ್ಷಯ್ಯ ಸ್ವಾಮಿಗಳು ತಮ್ಮ ಸಂಗೀತ ಶ್ರೀ ರುದ್ರದ ಮುಖಾಂತರ ಜನ್ಮಭೂಮಿಗೂ ನಾಡಿಗೂ ಬಹುದೊಡ್ಡ ಕೀರ್ತಿಯನ್ನು ತಂದಿರುವ ಕೀರ್ತಿ ಪುರುಷರಾಗಿದ್ದು ಅವರ ಅಪೂರ್ವ ಕೊಡುಗೆ ನಾಡವರಿಗೆ ತಿಳಿಸುವ ಪ್ರಯತ್ನ ಇನ್ನೂ ಹೆಚ್ಚು ಹೆಚ್ಚಾಗಿ ಈ ಸಂಗೀತ ರುದ್ರೇಶ್ವರ ಮಹಾ ಸಂಸ್ಥಾನದಿಂದ ನಡೆಯಲೆಂದು ಆಶಿಸುತ್ತೇನೆಂದು ಅವರು ಹೇಳಿದರು.

# ಲೋನ್ ಕಟ್ಟಲು ಸ್ನೇಹಿತರ ಬಳಿ ತಂದಿದ್ದ 18 ಲಕ್ಷ ರೂ. ಕಳವು




**ಕಲಬುರಗಿ,ಮೇ.23–**ಹೋಟೆಲ್ ವ್ಯಾಪಾರಿಯೊಬ್ಬರು ಖಾಸಗಿ ಫೈನಾನ್ಸ್‌ನಲ್ಲಿ ಪಡೆದಿದ್ದ ಲೋನ್ ಕಟ್ಟುವ ಸಲುವಾಗಿ ಸ್ನೇಹಿತರ ಹತ್ತಿರ ಕೈಗಡವಾಗಿ ತಂದಿದ್ದ 18 ಲಕ್ಷ ರೂಪಾಯಿಗಳನ್ನು ಕಳ್ಳರು ಕಳವು ಮಾಡಿರುವ ಘಟನೆ ನಗರದ ಹೀರಾಪುರ ಗೇಟ್ ಹತ್ತಿರದ ಪ್ರಕೃತಿ ಕಾಲೋನಿಯ ಕ್ಯೂಪಿ ಲೇಔಟ್‌ನಲ್ಲಿ ನಡೆದಿದೆ.

ರವಿಚಂದ್ರ ಪುಟಗಿ ಎಂಬುವವರ ಮನೆ ಬೀಗ ಮುರಿದು ಕಳ್ಳರು 18 ಲಕ್ಷ ರೂ.ನಗದು 40 ಸಾವಿರ ರೂ.ಮೌಲ್ಯದ ಬೆಳ್ಳಿ ಸಾಮಾನು ಸೇರಿ 18.50 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿಕೊಂಡು ಹೋಗಿದ್ದಾರೆ.

ರವಿಚಂದ್ರ ಅವರು ಹೋಟೆಲ್ ವ್ಯಾಪಾರಿಯಾಗಿದ್ದು, ಖಾಸಗಿ ಫೈನಾನ್ಸ್‌ನಲ್ಲಿ ತೆಗೆದುಕೊಂಡಿದ್ದ ಲೋನ್ ಕಟ್ಟುವ ಸಲುವಾಗಿ ಸ್ನೇಹಿತರ ಹತ್ತಿರ ಕೈಗಡವಾಗಿ 18 ಲಕ್ಷ ರೂ.ತಂದು ಮನೆಯಲ್ಲಿ ಇಟ್ಟಿದ್ದರು. ಮನೆಯವರೆಲ್ಲ ಸೇರಿ ಮನೆಗೆ ಬೀಗ ಹಾಕಿಕೊಂಡು ಜಗತ್ ವೃತ್ತದಲ್ಲಿರುವ ಸಂಬಂಧಿಕರ ಮದುವೆ ಸಮಾರಂಭಕ್ಕೆಂದು ಹೋಗಿದ್ದ ವೇಳೆ ಕಳ್ಳರು ಮನೆ ಕಳ್ಳತನ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಈ ಸಂಬಂಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ಕಾಂಗ್ರೆಸ್ ಸರ್ಕಾರ ಬಡ ಜನರ ಸರ್ಕಾರ : ಡಿ.ಎಸ್.ಹೂಲಗೇರಿ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಮೇ.23–** ಶಾಸಕರು ಅಭಿವೃದ್ಧಿ ಬಗ್ಗೆ ಮಾಹಿತಿ ಪಡೆದು ಮಾತನಾಡಬೇಕು, ಶೂನ್ಯ ಸಾಧನೆ ಎಂದು ಸರ್ಕಾರದ ಮೇಲೆ ಆರೋಪ ಮಾಡುವ ಮೊದಲು ರಾಜ್ಯದಲ್ಲಿ ಮತ್ತು ಕ್ಷೇತ್ರದಲ್ಲಿ ಆಗಿರುವ ಕೆಲಸಗಳ ಬಗ್ಗೆ ಅರಿತುಕೊಳ್ಳಬೇಕು ಎಂದು ಮಾಜಿ ಶಾಸಕ ಡಿ.ಎಸ್.ಹೂಲಗೇರಿ ಹೇಳಿದರು.




ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೊಷ್ಟಿಯಲ್ಲಿ ಮಾತನಾಡಿದ ಅವರು, ಲಿಂಗಸೂಗೂರು ಕ್ಷೇತ್ರದ ಶಾಸಕರು ಸರ್ಕಾರದ ಸಾಧನೆ ಶೂನ್ಯ ಸಾಧನೆ ಎಂದು ಹೇಳಿದ್ದಾರೆ, ರಾಜ್ಯ ಸರ್ಕಾರವು ಕ್ಷೇತ್ರದಲ್ಲಿ ಗೃಹಲಕ್ಷ್ಮೀ 63,453 ಫಲಾನುಭವಿಗಳಿಗೆ ಎಪ್ರಿಲ್ 2025 ರವರೆಗೆ ಗೃಹಲಕ್ಷ್ಮೀ ಕಂತುಗಳು ಜಮಾವಾಗಿವೆ.ಗೃಹ ಜ್ಯೋತಿ 51,611 ಮನೆಗಳ ಎಪ್ರಿಲ್ ವರೆಗೆ 200 ಯುನೀಟ್ ಉಚಿತ ನೀಡಲಾಗಿದೆ.

ಯುವ ನಿಧಿ 1,726 ವಿದ್ಯಾರ್ಥಿಗಳಿಗೆ ಫೆಬ್ರುವರಿ ವರೆಗೆ ನೀಡಲಾಗಿವೆ.ಶಕ್ತಿ ಯೋಜನೆ 1,73,77,638 ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ.

ಅನ್ನಭಾಗ್ಯ 3,35,935 ಕುಟುಂಬ ಸದಸ್ಯರು ಯೋಜನೆಯ ಸದುಪಯೋಗ ಪಡೆಯುತ್ತಿದ್ದಾರೆ. ಎಪ್ರಿಲ್ 2025 ರವರೆಗೆ ಉಚಿತ ಪ್ರತಿ ವ್ಯಕ್ತಿಗೆ 10 ಕೆಜಿ ಯಂತೆ ನ್ಯಾಯಬೆಲೆ ಅಂಗಡಿಯಲ್ಲಿ ಅಕ್ಕಿಯನ್ನು ವಿತರಣೆ ಮಾಡಲಾಗಿದೆ. ಆದರು ಶಾಸಕರು ಶೂನ್ಯ ಸಾಧನೆ ಎಂದು ಹೇಳಿರುವುದು ಅವರಿಗೆ ಮಾಹಿತಿ ಕೊರತೆ ಇದೆ, ಸುಮಾರು 80 ಕೋಟಿ ಅನುದಾನವನ್ನು ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಕೊಟ್ಟಿದೆ ಆದರೆ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೆ ತಮಗೆ ಬೇಕಿದಲ್ಲಿ ಯಾವುದೇ ಟೆಂಡರ್ ಕರಿಯದೆ ಕಳಪೆ ಸಿಸಿ ರಸ್ತೆ ಕಾಮಗಾರಿಗೆ ಖರ್ಚು ಮಾಡುತ್ತಿದ್ದಾರೆ,

ನನ್ನ ಅವಧಿಯಲ್ಲಿ ಕೋರ್ಟ್, ಸಬ್ ರಿಜಿಸ್ಟರ್, ತಾಯಿ ಮಕ್ಕಳ ಆಸ್ಪತ್ರೆ ಸೇರಿದಂತೆ ಅಮೃತ ಯೋಜನೆಗೆ 94 ಕೋಟಿ ಅನುದಾನ ತಂದಿದ್ದು ನಾನು ಆದರೆ ಅವುಗಳನ್ನು ಉದ್ಘಾಟನೆ ಮಾಡುತ್ತಾ ಪೂಜೆಗಳನ್ನು ಮಾಡುತ್ತಿರುವುದು ಈಗಿನ ಶಾಸಕರು, ಕ್ಷೇತ್ರಕ್ಕೆ ಅನುದಾನ ಕೊಟ್ಟರು ಸರ್ಕಾರದ ಮೇಲೆ ಸುಳ್ಳು ಆರೋಪ ಮಾಡುತ್ತಿರುವದು ತಮ್ಮ ಇಚ್ಛಾಶಕ್ತಿ ಕೊರತೆ ತೋರಿಸುತ್ತಿದೆ. ಅಭಿವೃದ್ಧಿಯಲ್ಲಿ ಅಂಕಿ ಸಂಖ್ಯೆಯೊಂದಿಗೆ ಚರ್ಚೆಗೆ ಸಿದ್ದನಿದ್ದೇನೆ, ನೀವು ಬನ್ನಿ ಅಭಿವೃದ್ಧಿ ಬಗ್ಗೆ ಚರ್ಚಿಸೋಣ, ಅದನ್ನು ಬಿಟ್ಟು ಕುಡಿಯಲು ನೀರು ಕೇಳಿದ ಸಾರ್ವಜನಿಕರಿಗೆ ಮನೆಗೆ ಬಂದು ಕೇಳಬೇಕು ಎಂದು ಹೇಳುವ ನೀವು ಜನರ ಸೇವಕ ಎಂಬುದನ್ನು ಮರೆತಿದ್ದೀರಿ, ಜನರೆ ಹೇಳುತ್ತಾರೆ ಸರ್ಕಾರದ ಸಾಧನೆ ಏನು ಎಂಬುದು ನಿಮ್ಮ ಸುಳ್ಳು ಆರೋಪಗಳನ್ನು ಯಾರು ನಂಬುವುದಿಲ್ಲ ಎಂದು ಕಠೋರವಾಗಿ ಹೇಳಿದರು.

ಈ ಸಂದರ್ಭದಲ್ಲಿ ಲಿಂಗಸೂಗೂರು ಬ್ಲಾಕ್ ಕಾಂಗ್ರೆಸ್ ಅದ್ಯಕ್ಷರಾದ ಗೋವಿಂದ ನಾಯಕ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅದ್ಯಕ್ಷರಾದ ಅಮರೇಶ ಹಿರೇಹೆಸರೂರು, ತಾಲ್ಲೂಕ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅದ್ಯಕ್ಷರಾದ ವೆಂಕಟೇಶ ಗುತ್ತೆದಾರ ರವರು, ಪುರಸಭಾ ಅದ್ಯಕ್ಷರಾದ ಬಾಬುರೆಡ್ಡಿ ಮುನ್ನೂರು, ಪುರಸಭಾ ಸದಸ್ಯರಾದ ಮಹ್ಮದ್ ರಫೀ, ಸಂಜೀವಪ್ಪ ಚಲುವಾದಿ ಸಂಜೀವನಕುಮಾರ,ಯುವ ಕಾಂಗ್ರೆಸ್ ಅದ್ಯಕ್ಷ ಸಂತೋಷ ಸೊಪ್ಪಿಮಠ, ಮೌನೇಶ ಪೂಜಾರಿ ಸೇರಿದಂತೆ ಇತರರು ಇದ್ದರು.

## ಕಾಮಿಡಿ ಕಿಲಾಡಿ ಖ್ಯಾತಿಯ ನಟ ಮಡೆನೂರು ಮನು ವಿರುದ್ಧ ಅತ್ಯಾಚಾರ ದೂರು ದಾಖಲು

**ಬೆಂಗಳೂರು,ಮೇ.23–** ಕಾಮಿಡಿ ಕಿಲಾಡಿ ಖ್ಯಾತಿಯ ನಟ ಮಡೆನೂರು ಮನು ವಿರುದ್ಧ ಅನ್ನಪೂರ್ಣೇಶ್ವರಿನಗರ ಪೊಲೀಸ್? ಠಾಣೆಯಲ್ಲಿ ಅತ್ಯಾಚಾರ ಪ್ರಕರಣ ದಾಖಲಾಗಿದೆ. ಬನಶಂಕರಿ 3ನೇ ಹಂತ, 5ನೇ ಕ್ರಾಸ್? ಚೌಡೇಶ್ವರಿ ನಿಲಯದಲ್ಲಿ ಸುಮಾರು 5 ವರ್ಷಗಳಿಂದ 33 ವರ್ಷದ ನಟಿ ವಾಸವಾಗಿದ್ದರು. ಇದೀಗ ನಾಗರಬಾವಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ನೆಲೆಸಿದ್ದಾರೆ.

2018ರಲ್ಲಿ ಈ ನಟಿಗೆ ಕಾಮಿಡಿ ಕಿಲಾಡಿ ಕಾರ್ಯಕ್ರಮದ ಮಡೆನೂರು ಮನು ಪರಿಚಯವಾಗಿದ್ದು, ಇವರಿಬ್ಬರು ಸ್ನೆ?ಹಿತರಾಗಿದ್ದಾರೆ. ಈ ನಡುವೆ ಮಡೆನೂರು ಮನುಗೆ ಈಗಾಗಲೇ ಮದುವೆಯಾಗಿದ್ದು ಒಂದು ಹೆಣ್ಣುಮಗು ಇದೆ.

2022, ನವಂಬರ್ 29ರಂದು ಶಿವಮೊಗ್ಗದ ಶಿಕಾರಿಪುರದಲ್ಲಿ ಕಾರ್ಯಕ್ರಮದ ನಿಮಿತ್ತ ಮಡೆನೂರು ಮನು ಅವರು ನನ್ನನ್ನು ಹಾಗೂ ಇತರೆ ಕಾಮಿಡಿ ನಟರನ್ನು ಕರೆದುಕೊಂಡು ಹೋಗಿದ್ದರು.

ಕಾರ್ಯಕ್ರಮ ಮುಗಿದ ನಂತರ ನಾನು ಶಿಕಾರಿಪುರದ ಹೋಟೆಲ್‌ನ ರೂಮ್‌ನಲ್ಲಿದ್ದಾಗ ನನಗೆ ಸಂಭಾವನೆ ನೀಡುವ ನೆಪದಲ್ಲಿ ಮಡೆನೂರು ಮನು ರೂಮಿಗೆ ಬಂದು ನನ್ನ ಮೇಲೆ ಅತ್ಯಾಚಾರ ಮಾಡಿದ್ದಾನೆ ಎಂದು ಆರೋಪಿಸಿ ನಟಿ ದೂರಿನಲ್ಲಿ ತಿಳಿಸಿದ್ದಾರೆ.

ಅಲ್ಲದೆ 2022ರ ಡಿಸೆಂಬರ್ 3ರಂದು ನನ್ನ ವಿರೋಧದ ನಡುವೆಯೂ ನನಗೆ ತಾಳಿ ಕಟ್ಟಿದ್ದಾನೆ. ನಂತರದ ದಿನಗಳಲ್ಲಿ ನನ್ನ ಮನೆಗೆ ಬಂದು ಹಲವಾರು ಬಾರಿ ಅತ್ಯಾಚಾರ ಮಾಡಿದ್ದಾನೆ. ನಾನು ಗರ್ಭಿಣಿಯಾಗಿರುವುದು ತಿಳಿದು ಮಾತ್ರೆ ನೀಡಿ ಎರಡು ಬಾರಿ ಗರ್ಭಪಾತ ಮಾಡಿಸಿದ್ದಾನೆ.

ನನ್ನ ಮೇಲೆ ಅತ್ಯಾಚಾರ ಮಾಡಿರುವ ಖಾಸಗಿ ವಿಡಿಯೋವನ್ನು ಆತನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಈ ವಿಚಾರವನ್ನು ಯಾರಿಗೂ ಹೇಳದಂತೆ ಬೆದರಿಕೆ ಹಾಕಿದ್ದಾನೆ ಎಂದು ನಟಿ ದೂರಿನಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಪ್ರಿಯಾಂಕ್ ಖರ್ಗೆಗೆ ಬರೀ ಮೋದಿ ಜಪ : ಚಲುವಾದಿ ನಾರಾಯಣಸ್ವಾಮಿ

**ಕಲಬುರಗಿ,ಮೇ.23–**ಇಲ್ಲಿನ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯಲ್ಲಿನ ಸಮಸ್ಯೆಗಳ ವಿಚಾರ ಬಿಟ್ಟು, ಬರೆ ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆಯೇ ಮಾತನಾಡುತ್ತಾರೆ. ಪ್ರಧಾನಿಗಳ ಬಗ್ಗೆ ನೀವೇಷ್ಟೇ ಮಾತನಾಡಿದರು, ನರಿ ಮಾತನ್ನು ಗಿರಿ ಯಾವತ್ತೂ ಕೇಳಲ್ಲ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಚಲುವಾದಿ ನಾರಾಯಣಸ್ವಾಮಿ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ವಾಗ್ದಾಳಿ ನಡೆಸಿದರು.



ಬುಧವಾರ ನಗರದ ಬಿಜೆಪಿ ಕಚೇರಿಯಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿ ಅವರ ಬಗ್ಗೆ ಮಾತನಾಡುವುದು ಬಿಟ್ಟು, ನಿಮ್ಮ ಜಿಲ್ಲೆಯಲ್ಲಿನ ಸಮಸ್ಯೆಗಳ ಕುರಿತು ಮೊದಲು ಮಾತನಾಡಿ. ಪ್ರಧಾನಿ ಮೋದಿ ಅವರ ಬಗ್ಗೆ ಹೇಳಿಕೆ ನೀಡಿದರೆ, ಅದು ನಾಯಿ ಬೊಗಳಿದಂತೆ ಆಗಲಿದೆ. ನೀವು ಎಷ್ಟು ಬೇಕಾದರೂ ಮಾತಾಡಿಕೊಳ್ಳಿ ದೇವಲೋಕ ಏನು ಹಾಳಾಗಲ್ಲ ಎನ್ನುತ್ತಲೇ ಪ್ರಿಯಾಂಕ್ ಖರ್ಗೆ ಅವರನ್ನು ನಾಯಿಗೆ ಹೋಲಿಸಿ ಮಾತನಾಡಿದರು.

ಇನ್ನೂ, ಪಾಕ್ ಉಗ್ರರು ಧರ್ಮ ಕೇಳಿ ಅಮಾಯಕ ಭಾರತೀಯರನ್ನು ಹೊಡೆದಿದ್ದಾರೆ. ಇದರ ಬಗ್ಗೆ ಮಾತನಾಡುವುದು ಬಿಟ್ಟು, ಎಷ್ಟು ಫೈಟ್, ವಿಮಾನ, ಮಿಸೈಲ್ ಹೋಗಿವೆ ಎಂದು ಕಾಂಗ್ರೆಸ್ ಶಾಸಕರೊಬ್ಬರು ಕೇಳುತ್ತಾರೆ. ನಮ್ಮ ಎಷ್ಟು ವಿಮಾನಗಳನ್ನು ಪಾಕಿಸ್ತಾನ ಉಳಿಸಿದೆ ಎಂದು ರಾಹುಲ್ ಗಾಂಧಿ ಅವರು ಕೇಳುತ್ತಾರೆ. ಮಲ್ಲಿಕಾರ್ಜುನ ಖರ್ಗೆ ಅವರು ನಮ್ಮ ಪಾಕಿಸ್ತಾನ ನಮ್ಮ ಪಾಕಿಸ್ತಾನ ಎಂದು ಭಾಷಣದೂದ್ದಕ್ಕೂ ಸಂಬೋದಿಸುತ್ತಾರೆ. ಹಾಗಾದರೆ ಕಾಂಗ್ರೆಸ್ನವರು ಯಾರ ಪರ ಭಾರತಕ್ಕೋ ಅಥವಾ ಪಾಕಿಸ್ತಾನಕ್ಕೋ ಎಂದು ನಿರ್ಧಾರ ಮಾಡಲಿ ಎಂದರು.

ನಿಮ್ಮ ಕಾಲದಲ್ಲಿ ಏಕೆ ಜಾತಿ ಗಣತಿ ಮಾಡಿಲ್ಲ. ಈಗ ಏಕೆ ಜಾತಿ ಗಣತಿ ಬೇಕು ಎನ್ನುತ್ತಿದ್ದೀರಿ ? ದೇಶದಲ್ಲಿ ಜನರ ಮಧ್ಯ ಜಾತಿಗಳ ನಡುವೆ ಜಗಳ ತಂದಿಡುವ ಕೆಲಸ ಕಾಂಗ್ರೆಸ್ ಮಾಡುತ್ತಿದೆ. ಒಳಮೀಸಲಾತಿ ಮಾಡಲು ಈಗ ಆದೇಶ ನೀಡಿದ್ದೀರಿ. ಅದು ಗೊಂದಲಕ್ಕೆ ಕಾರಣವಾಗಿದೆ. ಬೇಡ ಜಂಗಮ, ಬುಡ್ಗ ಜಂಗಮರ ಸಂಖ್ಯೆ 500 ರಿಂದ 5 ಲಕ್ಷ ಆಗಿದೆ ಎಂದು ವರದಿ ನೀಡಲಾಗಿದ್ದು ಸಹ ಗೊಂದಲ ಉಂಟು ಮಾಡಿದೆ ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿಕೆ ನೀಡಿ, ಅದರ ಬಗ್ಗೆಯೂ ಸಹ ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಇನ್ನೂ, ನಿಮ್ಮ ಮುಳಬಾಗಿಲು ಶಾಸಕ ಕಟ್ಟೂರು ಮಂಜುನಾಥ್ ಬುಡ್ಗ ಜಂಗಮ ಪ್ರಮಾಣ ಪತ್ರ ಪಡೆದಿದ್ದಾರೆ. ಕೋರ್ಟ್ ಛೀಮಾರಿ ಹಾಕಿದೆ. ಇದರ ಬಗ್ಗೆ ಸಿಎಂ ಸಿದ್ದರಾಮಯ್ಯ ಪ್ರಶ್ನೆ ಮಾಡಿಲ್ಲ, ಇದನ್ನು ನೋಡಿದರೆ ಕಾಂಗ್ರೆಸ್‌ಗೆ ಎರಡು ನಾಲಿಗೆ ಇದೆ ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಶಾಸಕರಾದ ಬಸವರಾಜ್ ಮತ್ತಿಮಡು, ಡಾ.ಅವಿನಾಶ್ ಜಾಧವ, ಬಿಜೆಪಿ ಗ್ರಾಮಾಂತರ ಜಿಲ್ಲಾ ಅಧ್ಯಕ್ಷ ಅಶೋಕ್ ಬಗಲಿ, ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೆಲ್ಕೂರ್, ಮಾಜಿ ವಿ.ಪ ಸದಸ್ಯ ಅಮರನಾಥ್ ಪಾಟೀಲ್, ಬಿಜೆಪಿ ಮಾಜಿ ಅಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ, ಮಾಜಿ ಸಚಿವ ಬಾಬುರಾವ ಚವ್ಹಾಣ, ಮುಖಂಡರಾದ ಅವ್ವಣ್ಣ ಮ್ಯಾಕೇರಿ, ಶರಣಪ್ಪ ತಳವಾರ್, ಧರ್ಮಣ್ಣ ಇಟಗಿ, ಮಹದೇವ್ ಬೆಳಮಗಿ, ನಾಗರಾಜ್ ಮಹಾಗಾಂವಕರ್ ಸೇರಿ ಅನೇಕರು ಇದ್ದರು.

## ಗೃಹರಕ್ಷಕ ದಳ: ನೋಂದಣಿಗೆ ಅರ್ಜಿ ಆಹ್ವಾನ

**ರಾಯಚೂರು,ಮೇ.23–** ಇಲ್ಲಿನ ಗೃಹರಕ್ಷಕ ದಳದಿಂದ ನಾಗರೀಕ ಪೌರ ರಕ್ಷಣಾ ಸ್ವಯಂ ಸೇವಕರಾಗಲು ನೋಂದಣಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯಲ್ಲಿ ಯುದ್ಧದಂತಹ ಸಂದರ್ಭಗಳಲ್ಲಿ ಉಂಟಾಗುವ ಸಂಭವನೀಯ ಅಪಘಾತಗಳಿಂದ ಸಾರ್ವಜನಿಕರನ್ನು ರಕ್ಷಿಸುವ ಬಗ್ಗೆ ಸ್ವಯಂ ಸೇವಕರ ಅಗತ್ಯವಿರುವುದರಿಂದ ಸಿವಿಲ್ ಡಿಫೇನ್ಸ್ ಆಕ್ಟ್ 1968 ರಂತೆ ಪ್ರತಿ 100 ನಾಗರೀಕರಿಗೆ ಒಬ್ಬರಂತೆ ಪೌರರಕ್ಷಣಾ ಸ್ವಯಂ ಸೇವಕರನ್ನು ನೋಂದಣಿ ಮಾಡಿಕೊಳ್ಳಲಾಗುತ್ತಿದ್ದು, ಆಸಕ್ತರು ಮೇ.31ರೊಳಗಾಗಿ ನಿಗಧಿತ ಅರ್ಜಿ ನಮೂನೆಯನ್ನು ಭರ್ತಿಮಾಡಿ ಗೃಹರಕ್ಷಕದಳ ಜಿಲ್ಲಾ ಸಮಾದೇಷ್ಟರ ಕಚೇರಿ ಪ್ರಥಮ ದರ್ಜೆ ಕಾಲೇಜಿನ ಹಿಂದೆ ನಿಜಲಿಂಗಪ್ಪ ಕಾಲೋನಿ ರಾಯಚೂರು ಹಾಗೂ ಪೌರರಕ್ಷಣಾ ಕಚೇರಿ ಆರ್.ಟಿ.ಪಿ.ಎಸ್ ಕಾಲೋನಿ ಶಕ್ತಿನಗರ ಟೈಪ್–2 ಮನೆ.ನಂ. 03, ಶಕ್ತಿನಗರ, ಜಿ.ರಾಯಚೂರು ಅಥವಾ ೨ರಭಿಜ.ಇಚಿಡಿಟಿಚಿಣಚಿಇಚಿ.ರಠತ.ಟಿ. ಮೂಲಕ ಅರ್ಜಿಗಳನ್ನು ಪಡೆದುಕೊಂಡು ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು 4ನೇ ತರಗತಿ ಉತ್ತೀರ್ಣರಾಗಿರಬೇಕು. ದೈಹಿಕವಾಗಿ ಸಧೃಡವಾಗಿರಬೇಕು. ಅರ್ಜಿ ಸಲ್ಲಿಸುವಾಗ ಆಧಾರ ಕಾರ್ಡ್ ನಕಲು ಪ್ರತಿ ಮತ್ತು ಅಂಕಪಟ್ಟಿ ಅಥವಾ ಶಾಲಾ ವರ್ಗಾವಣೆ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ನಾಗರೀಕ ಪೌರರಕ್ಷಣಾ ಸ್ವಯಂ ಸೇವಕ ಸಂಸ್ಥೆಯಾಗಿದ್ದು ಯಾವುದೆ ಮಾಸಿಕ ವೇತನ ಇರುವದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಗೃಹರಕ್ಷಕದಳ ಕಚೇರಿ ದೂರವಾಣಿ ಸಂಖ್ಯೆ: 08532–221679, 9686767151 ಮತ್ತು ಶಕ್ತಿನಗರ ಪೌರರಕ್ಷಣಾ ಕಚೇರಿ ದೂರವಾಣಿ ಸಂಖ್ಯೆ: 9741333806ಗೆ ಸಂಪರ್ಕಿಸುವಂತೆ ಜಿಲ್ಲಾ ಗೃಹರಕ್ಷಕದಳ ಕಮಾಂಡೆಂಟ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೆಸ್ಕಾಂ: ಇಂದು ನಗರದ ವಿವಿಧಡೆ ವಿದ್ಯುತ್ ವ್ಯತ್ಯಯ

**ರಾಯಚೂರು,ಮೇ.23–** ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆಯ ಉಪ ವಿಭಾಗ–1ರ 11 ಕೆವಿ ಮಾರ್ಗ ಹಾಗೂ ಜಿ.ಒ.ಎಸ್ ಕಾಮಗಾರಿ ನಿರ್ವಹಿಸುತ್ತಿರುವ ಪ್ರಯುಕ್ತ ಮೇ.23ರ ಬೆಳಿಗ್ಗೆ 11ಗಂಟೆಯಿಂದ ಮಾಧ್ಯಾಹ್ನ 2ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

ಅಂದು ಬೆಳಿಗ್ಗೆ ಸ್ಟೇಷನ್‌ಏರಿಯಾ, ಗುಡ್‌ಶೆಡ್ ಏರಿಯಾ, ಆಶಾಪೂರು ಸರ್ಕಲ್, ಕೆ.ಕೆ.ರೆಡ್ಡಿ ಫಂಕ್ಷನ್ ಹಾಲ್, ಎಫ್.ಸಿ.ಐ ಗೋಡಾನ್, ಅಮರೇಶ್ವರ ಕಾಲೋನಿ, ಆರ್.ಆರ್ ಕಾಲೋನಿ, ಪದ್ಮಾವತಿ ಕಾಲೋನಿ, ರಾಜಮಾತಗುಡಿ, ಆಫಿಸರ್ಸ್ ಕಾಲೋನಿ, ಇಂಜಿನೀಯರ್ಸ್ ಕಾಲೋನಿ, ಪವನ್ ಲೇಔಟ್, ರಾಯಲ್ ಫೋರ್ಟ್, ಬಿ.ಸಿ.ಎಮ್ ಹಾಸ್ಟಲ್, ರಾಧಕೃಷ್ಣ ಫಂಕ್ಷನ್ ಹಾಲ್ ಸೇರಿದಂತೆ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ–1ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುನ್ಮಾನ ಮಾಪಕಗಳ ಅಳವಡಿಕೆಗೆ ಸಹಕಾರಿಸುವಂತೆ ಗ್ರಾಹಕರಲ್ಲಿ ಮನವಿ

**ರಾಯಚೂರು,ಮೇ.23–** ಇಲ್ಲಿನ ಜೆಸ್ಕಾಂ ಇಲಾಖೆಯಿಂದ ರಾಯಚೂರು ನಗರದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಎಲೆಕ್ಟ್ರೋ–ಮೆಕ್ಯಾನಿಕಲ್, ನೇರ ಸಂಪರ್ಕ ಹಾಗೂ ವಿದ್ಯುತ್ ಯುನಿಟ್‌ಗಳನ್ನು ದಾಖಲಿಸದ ವಿದ್ಯುತ್ ಸ್ಥಾವರಗಳಿಗೆ ಹೊಸ ವಿದ್ಯುನ್ಮಾನ ಮಾಪಕಗಳನ್ನು ಅಳವಡಿಸಲಾಗುತ್ತಿದ್ದು, ಇಲಾಖೆ ಹಾಗೂ ಏಜೆನ್ಸಿ ಸಿಬ್ಬಂದಿಗೆ ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.

ಎಲೆಕ್ಟ್ರೋ–ಮೆಕ್ಯಾನಿಕಲ್, ನೇರ ಸಂಪರ್ಕ ಅಥವಾ ವಿದ್ಯುತ್ ಯುನಿಟ್‌ಗಳನ್ನು ದಾಖಲಿಸದ ವಿದ್ಯುತ್ ಸ್ಥಾವರಗಳಿಗೆ ಹೊಸ ವಿದ್ಯುನ್ಮಾನ ಮಾಪಕಗಳನ್ನು ಅಳವಡಿಸುವ ಸಲುವಾಗಿ ವಿ.ಆರ್.ಪಾಟೀಲ್ ವಿವಿಧ್ ವಿದ್ಯುತ್ ನಿರ್ಮಾಣ ಪ್ರೈ.ಲಿಮಿಟೆಡ್ ಅವರಿಗೆ ಜೆಸ್ಕಾಂ ಕಡೆಯಿಂದ ಗುತ್ತಿಗೆ ನೀಡಲಾಗಿದ್ದು, ಈ ವಿದ್ಯುತ್ ಮಾಪನಗಳನ್ನು ಬದಲಾಯಿಸುವ ಸಂದರ್ಭದಲ್ಲಿ ನಗರದ ವಿವಿಧೆಡೆ ಸಾರ್ವಜನಿಕರು ಅಡ್ಡಿಪಡಿಸಿರುವುದು ಕಂಡುಬಂದಿರುತ್ತದೆ. ಸಾರ್ವಜನಿಕರಿಗೆ ಉತ್ತಮ ವಿದ್ಯುತ್ ಸೌಲಭ್ಯ ಒದಗಿಸಲು ವಿದ್ಯುನ್ಮಾನ ಮಾಪಕಗಳ ಅವಶ್ಯವಿರುವಕಾರಣ ವಿ.ಆರ್ ಪಾಟೀಲ್ ವಿವಿಧ್ ವಿದ್ಯುತ್ ನಿರ್ಮಾಣ ಪ್ರೈ. ಲಿಮಿಟೆಡ್ ಅವರ ಸಿಬ್ಬಂದಿ ವಿದ್ಯುತ್ ಮಾಪಕಗಳನ್ನು ಬದಲಾಯಿಸುವಾಗ ರಾಯಚೂರು ನಗರದ ಗ್ರಾಹಕರು ಸಹಕರಿಸಬೇಕು. ಸಾರ್ವಜನಿಕರಿಗೆ ವಿದ್ಯುತ್ ಮಾಪಕಗಳನ್ನು ಬದಲಾಯಿಸುವಾಗ ಯಾವುದೇ ಕುಂದು ಕೊರತೆ ಉಂಟಾದದಲ್ಲಿ ಸಂಬಂಧಪಟ್ಟ ಶಾಖಾಧಿಕಾರಿ ಅಥವಾ ಉಪವಿಭಾಗಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೈನಿಕರ ತ್ಯಾಗ ಬಲಿದಾನ ಸರ್ವರಿಗೂ ಸ್ಫೂರ್ತಿದಾಯಕ: ಪಟ್ಟದೇವರು

**ಭಾಲ್ಕಿ,ಮೇ.23–** ದೇಶಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡುವ ಸೈನಿಕರ ಕಾರ್ಯ, ಬದುಕು ನಮ್ಮೆಲ್ಲರಿಗೂ ಮಾದರಿ, ಸ್ಫೂರ್ತಿ ಎಂದು ಅನುಭವ ಮಂಟಪ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಹೇಳಿದರು. ಪಟ್ಟಣದಲ್ಲಿ ಬುಧವಾರ ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ಭಾರತ ಯಶಸ್ಸು ಗಳಿಸಿದ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ನಾಗರಿಕ ತಿರಂಗಾ ಯಾತ್ರೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದೇಶದ ರಕ್ಷಣೆ, ಸುರಕ್ಷತೆ ನಮ್ಮೆಲ್ಲರ ಪ್ರಥಮ ಆದ್ಯತೆ ಆಗಬೇಕು. ಸಮಯ ಬಂದರೆ ದೇಶಕ್ಕಾಗಿ ಪ್ರಾಣವನ್ನೂ ಅರ್ಪಿಸುವ ದೇಶಭಕ್ತಿಯ ಭಾವ ಎಲ್ಲರಲ್ಲಿ ಬೆಳೆಯಬೇಕು. ದೇಶ ಉಳಿದಾಗ ಮಾತ್ರ ನಾವೆಲ್ಲರೂ ಉಳಿಯಲು ಸಾಧ್ಯ ಎಂದು ಹೇಳಿದರು. ಆಪರೇಷನ್ ಸಿಂಧೂರ ಮೂಲಕ ಆತಂಕವಾದಿಗಳನ್ನು ಮಟ್ಟ ಹಾಕಿದ ನಮ್ಮ ಸೈನಿಕರ ಶೌರ್ಯ ಜಗತ್ತು ಮೆಚ್ಚುವಂತದ್ದು ಎಂದು ಶ್ಲಾಘಿಸಿದರು.

ಮಾಜಿ ಶಾಸಕ ಪ್ರಕಾಶ ಖಂಡ್ರೆ ಮಾತನಾಡಿ, ವಿದ್ಯಾರ್ಥಿಗಳು ಬಾಲ್ಯದಿಂದಲೇ ದೇಶಪ್ರೇಮದ ಕಿಚ್ಚು ಬೆಳೆಸಿಕೊಂಡು ರಾಷ್ಟದ ಸೇವೆಗೆ ಸಿದ್ಧರಾಗಬೇಕು. ಅಮಾಯಕ ಜೀವಗಳ ಬಲಿ ತೆಗೆದುಕೊಂಡ ಆತಂಕವಾದಿಗಳಿಗೆ ನಮ್ಮ ದೇಶದ ಹೆಮ್ಮೆ ಸೈನಿಕರು ಮುಟ್ಟಿ ನೋಡಿಕೊಳ್ಳುವಂತೆ ಉತ್ತರ ನೀಡಿರೋದು ಸಂತಸದ ಸಂಗತಿ ಎಂದು ತಿಳಿಸಿದರು. ಹಾವಗಿಲಿಂಗೇಶ್ವರ ಶಿವಾಚಾ ರ್ಯರು ಮಾತನಾಡಿ, ದೇಶದ ರಕ್ಷಣೆಗಾಗಿ ನಾವೆಲ್ಲರೂ ಯಾವುದೇ ರೀತಿಯ ತ್ಯಾಗ ಮತ್ತು ಹೋರಾಟಕ್ಕೂ ಸಿದ್ಧರಾಗುವ ಮನಸ್ಥಿತಿ ಬೆಳೆಸಿಕೊಂಡು ದೇಶಪ್ರೇಮ ಮೆರೆಯಬೇಕು ಎಂದು ಹೇಳಿದರು.



ಮಾಜಿ ಸೈನಿಕ ಶಿವಲಿಂಗಯ್ಯ ಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷರಾದ ಸೋಮನಾಥ ಪಾಟೀಲ ಮಾತನಾಡಿದರು.ಭಾರತ ಮಾತೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ಬಳಿಕ ಭಾಲ್ಕೇಶ್ವರ ಮಂದಿರದಿಂದ ಆರಂಭವಾದ ತಿರಂಗಾ ಯಾತ್ರೆ, ಬೊಮ್ಮಗೊಂಡೇಶ್ವರ ವೃತ್ತ, ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತದ ಮೂಲಕ ಸಾಗಿ ಮಹಾತ್ಮ ಗಾಂಧಿ ವೃತ್ತದಲ್ಲಿ ಸಮಾವೇಶಗೊಂಡಿತ್ತು.

ಪ್ರಮುಖರಾದ ಈಶ್ವರಸಿಂಗ್ ಠಾಕೂರ್, ವೀರಣ್ಣ ಕಾರಬಾರಿ, ಶಿವರಾಜ ಗಂದಗೆ, ಗೋವಿಂದರಾವ್ ಬಿರಾದರ, ಚನ್ನಬಸವ ಬಳತೆ, ಕಿಶನರಾವ್ ಪಾಟೀಲ ಎನ್. ಡಿ. ಬಗದುರೆ, ತಾನಾಜಿ ರಾಠೋಡ್, ಇದ್ದರು.

Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**